# ಹಂಪಿ ಟೈಮ್ಸ್
HAMPI TIMES

ಕನ್ನಡ ದಿನಪತ್ರಿಕೆ
KANNADA DAILY

ಸಂಪಾದಕ: ಬಸಾಪುರ ಬಸವರಾಜ
EDITOR: BASAPUR BASAVARAJA
Email: hampitimes@gmail.com | M:94486 33038

ಸಂಪುಟ:02 • ಸಂಚಿಕೆ: 63 • ಪಿ.ಆರ್.ಜಿ.ಐ.ನಂ.:KARKAN/2023/88055 • ವಿಜಯನಗರ • 01.09.2024 • ಭಾನುವಾರ • ಪುಟ:04 • ಬೆಲೆ:2
Volume:02 • Issue: 63 • PRGI No:KARKAN/2023/88055 • VIJAYANAGARA • 01.09.2024 • Sunday • Page:04 • Rs:2







## ಮೈಕ್ರೋ ನ್ಯೂಸ್

### ಸೆ. 2ರಂದು ಸಾರಿಗೆ ಸೌಲಭ್ಯ ಕೊರತೆ ಫೋನ್-ಇನ್ ಕಾರ್ಯಕ್ರಮ

**ಹಂಪಿ ಟೈಮ್ಸ್ ಹೊಸಪೇಟೆ**

ಪ್ರಯಾಣಿಕರ ಮತ್ತು ಶಾಲಾ ಕಾಲೇಜು ವಿದ್ಯಾರ್ಥಿಗಳ ಸಮಸ್ಯೆಗಳನ್ನು ಪರಿಹರಿಸಲು ಹಾಗೂ ಸಾರ್ವಜನಿಕ ಪ್ರಯಾಣಿಕರಿಗೆ ಸಮರ್ಪಕ ಸಾರಿಗೆ ಸೌಲಭ್ಯ ಹಾಗೂ ಸಲಹೆಗಳನ್ನು ಸ್ವೀಕರಿಸಿ ಕಲ್ಪಿಸಲು ಸೆಪ್ಟೆಂಬರ್ 02 ರಂದು ಮಧ್ಯಾಹ್ನ 3.30 ರಿಂದ 4.30ರವರೆಗೆ ಫೋನ್-ಇನ್ ಕಾರ್ಯಕ್ರಮ ನಡೆಯಲಿದೆ. ಸಾರ್ವಜನಿಕ ಪ್ರಯಾಣಿಕರು ಮತ್ತು ಶಾಲಾ ಕಾಲೇಜು ವಿದ್ಯಾರ್ಥಿಗಳು ಸಾರಿಗೆ ಸೌಲಭ್ಯದ ಕೊರತೆ ಕಂಡುಬಂದಲ್ಲಿ ದೂರವಾಣಿ ಸಂಖ್ಯೆ ಮೊ:7760992314, 7760992317ಗೆ ಕರೆ ಮಾಡಿ ತಮ್ಮ ಸಮಸ್ಯೆಗಳನ್ನು ತಿಳಿಸಲು ಕೋರಲಾಗಿದೆ ಎಂದು ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ನಿಗಮ ಹೊಸಪೇಟೆ ವಿಭಾಗದ ವಿಭಾಗೀಯ ನಿಯಂತ್ರಣಾಧಿಕಾರಿ ತಿಳಿಸಿದ್ದಾರೆ.

### ಸೆ.5ಕ್ಕೆ ಉದ್ಯಮಶೀಲತಾ ಪ್ರೇರಣಾ ಕಾರ್ಯಕ್ರಮ

**ಹಂಪಿ ಟೈಮ್ಸ್ ಹೊಸಪೇಟೆ**

ಕರ್ನಾಟಕ ಉದ್ಯಮಶೀಲತಾ ಅಭಿವೃದ್ಧಿ ಕೇಂದ್ರ (ಸಿಡಾಕ್) ಇವರು ಸ್ವಂತ ಉದ್ಯೋಗ ವನ್ನು ಕೈಗೊಳ್ಳಲು ಇಚ್ಛಿಸುವ ಎಲ್ಲಾ ವರ್ಗದ ಯುವಕ ಯುವತಿಯರಿ ಗಾಗಿ ಒಂದು ದಿನದ ಉದ್ಯಮಶೀಲತಾ ಪ್ರೇರಣಾ ಕಾರ್ಯ ಕ್ರಮವನ್ನು ಸೆಪ್ಟಂಬರ್ 5 ರಂದು ನಗರದ ತಾಪಂ ಕಚೇರಿಯಲ್ಲಿ ಆಯೋಜಿಸಿದ್ದು ಆಸಕ್ತರು ಭಾಗವಹಿಸಬಹುದು. ಸ್ವಂತ ಉದ್ಯಮವನ್ನು ಸ್ಥಾಪಿಸಲು ಬಯಸುವ ಆಸಕ್ತರಿಗೆ ಪ್ರೇರೇಪಣೆ, >>4

# ಹೊಸಪೇಟೆ-ಮಂಗಳೂರಿಗೆ ರೈಲ್ವೇ ಸಂಪರ್ಕ ಕಲ್ಪಿಸಿ

## ಪ್ರವಾಸೋದ್ಯಮ, ವಾಣಿಜ್ಯ ಅಭಿವೃದ್ಧಿ, ಉದ್ಯೋಗ ಸೃಷ್ಟಿ। ಜನರ ಆರ್ಥಿಕಮಟ್ಟ ಸುಧಾರಣೆ

## ವಿಜಯನಗರ ರೈಲ್ವೇ ಅಭಿವೃದ್ಧಿ ಕ್ರಿಯಾ ಸಮಿತಿ ಪದಾಧಿಕಾರಿಗಳು ಒತ್ತಾಯಿಸಿ ಮನವಿ

**ಹಂಪಿ ಟೈಮ್ಸ್ ಹೊಸಪೇಟೆ**

ಹಂಪಿಯಿಂದ ರಾಜ್ಯದ ಇತರ ಪ್ರವಾಸಿ ತಾಣಗಳಾದ ಹಾಸನ, ಹಳೇಬೀಡು, ಬೇಲೂರು, ಶ್ರಣಬೆಳಗೋಳ, ಕುಕ್ಕೆ ಸುಬ್ರಮಣ್ಯ, ಧರ್ಮಸ್ಥಳ, ಹಾಗೂ ಶೈಕ್ಷಣಿಕ ಮತ್ತು ಬೃಹತ್ ಆಸ್ಪತ್ರೆ ಕೇಂದ್ರಗಳಾದ ಮಣಿಪಾಲ-ಉಡುಪಿ-ಮಂಗಳೂರಿಗೆ ನೇರ ರೈಲು ಆರಂಭಿಸಬೇಕು ಎಂದು ಒತ್ತಾಯಿಸಿ ವಿಜಯನಗರ ರೈಲ್ವೇ ಅಭಿವೃದ್ಧಿ ಕ್ರಿಯಾ ಸಮಿತಿ ಪದಾಧಿಕಾರಿಗಳು ಒತ್ತಾಯಿಸಿ, ನಗರದ ನಿಲ್ದಾಣದಲ್ಲಿ ರೈಲ್ವೇ ಪ್ರಾದೇಶಿಕ ಅಧಿಕಾರಿ ಮುಕೇಶ್ ಕುಮಾರ್ ಮೂಲಕ ನೈರುತ್ಯ ರೈಲ್ವೇ ವಲಯ ಪ್ರಧಾನ ವ್ಯವಸ್ಥಾಪಕರಿಗೆ ಬೇಡಿಕೆಗಳ ಮನವಿ ಸಲ್ಲಿಸಿದರು.

ಕ್ರಿಯಾ ಸಮಿತಿ ಅಧ್ಯಕ್ಷ ವೈ.ಯಮುನೇಶ್ ಮಾತನಾಡಿ, ಪ್ರವಾಸೋಧ್ಯಮ ಅಭಿವೃದ್ಧಿ ಹಾಗೂ ಉದ್ಯೋಗ ಸೃಷ್ಠಿಗೆ ರೈಲ್ವೆ ಸಂರ್ಪಕ ಅಗತ್ಯವಿದೆ. ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರು 2030 ರೊಳಗೆ ಪ್ರವಾಸೋಧ್ಯಮ ಚಟುವಟಿಕೆಗಳಿಂದ 20 ಲಕ್ಷ ಕೋಟಿರೂ ಸಂಗ್ರಹಗೊಳ್ಳಲಿದೆ ಮತ್ತು 14 ಕೋಟಿ ಉದ್ಯೋಗ ಸೃಷ್ಠಿಯಾಗಲಿವೆ ಎಂದಿದ್ದಾರೆ. ಅವರ ದೂರದೃಷ್ಠಿಯ ಹೇಳಿಕೆಯನ್ನು ಸಾಕಾರಗೊಳಿಸುವ ಮಹತ್ತರ ಜವಾಬ್ದಾರಿ ರೈಲ್ವೆ ಇಲಾಖೆ ಮತ್ತು ಪ್ರವಾಸೋದ್ಯ ಇಲಾಖೆಗಳ ಮೇಲಿದೆ. ನಮ್ಮ ರಾಜ್ಯದಲ್ಲಿ ವಿವಿಧ ಪ್ರವಾಸಿ ತಾಣಗಳು ಹಾಗೂ ವಿಶ್ವ ಪಾರಂಪರಿಕ ತಾಣಗಳ ನಡುವೆ ನೇರ



ರೈಲು ಸಂರ್ಪಕ ಕಲ್ಪಿಸಿ ಪ್ರವಾಸಿಗರು, ಪ್ರಯಾಣಿಕರಿಗೆ ಅನುಕೂಲ ಕಲ್ಪಿಸಿದಲ್ಲಿ ಕಲ್ಯಾಣ ಕರ್ನಾಟಕ ಹೆಬ್ಬಾಗಿಲಿನಂತಿರುವ ವಿಜಯನಗರ ಜಿಲ್ಲೆ ಮತ್ತು ಬಂದರುನಗರ ಮಂಗಳೂರಿಗೆ ನೇರ ಸಂರ್ಪಕ ದೊರೆತು, ವ್ಯಾಪಾರ ವಹಿವಾಟುಗಳು ವೃದ್ದಿಯಾಗಲಿವೆ.



ವಿಜಯನಗರ ಜಿಲ್ಲೆ ಮತ್ತು ಕರಾವಳಿ ಜಿಲ್ಲೆಗಳಲ್ಲಿ ಪ್ರವಾಸೋದ್ಯಮ ಮತ್ತು ಆರ್ಥಿಕ ಚಟುವಟಿಕೆಗಳು ವೃದ್ದಿಯಾಗುವ ನಿಟ್ಟಿನಲ್ಲಿ ಹೊಸಪೇಟೆಯಿಂದ ಕೊಟ್ಟೂರು ಮಾರ್ಗವಾಗಿ ಮಂಗಳೂರಿಗೆ ನೇರ ರೈಲ್ವೇ ಸಂರ್ಪಕ ಕಲ್ಪಿಸಬೇಕು ಎಂದು ಆಗ್ರಹಿಸಿದರು.

**ಬೆಳಗಾವಿ-ಹೈದ್ರಾಬಾದ್-ಭದ್ರಾಚಲಂ ಪುನರಾರಂಭಿಸಿ:** ಕ್ರಿಯಾಸಮಿತಿ ಉಪಾಧ್ಯಕ್ಷರಾದ ಉಮಾಮಹೇಶ್ವರ್ ಅವರು ಮಾತನಾಡಿ ಉತ್ತರ ಕರ್ನಾಟಕದ ಜಿಲ್ಲೆಗಳಿಂದ ಪ್ರಸಿದ್ದ ಯಾತ್ರಾಸ್ಥಳ ಮಂತ್ರಾಲಯ ಮಾರ್ಗವಾಗಿ ಈ ಹಿಂದೆ ಸಂಚರಿಸುತ್ತಿದ್ದ ರೈಲನ್ನು ಕಳೆದ 4 ತಿಂಗಳಿಂದ ಸಂಚಾರ ರದ್ದುಪಡಿಸಿರುವುದು ಖಂಡನೀಯ. ಈ ಜಿಲ್ಲೆಗಳಿಂದ ಮಂತ್ರಾಲಯ ಹಾಗೂ ರಾಯಚೂರು, ಹೈದ್ರಬಾದ್ ಕಡೆಗೆ ಹೋಗುವ ಪ್ರಯಾಣಿಕರಿಗೆ ತೀವ್ರ ತೊಂದರೆಯಾಗಿದೆ. ಕೂಡಲೇ ಸದ್ರಿ ರೈಲನ್ನು ಪುನರ್ ಆರಂಭಿಸಬೇಕೆಂದು ಆಗ್ರಹಿಸಿದರು. ಹಾಗೂ ಹೊಸಪೇಟೆ ನಿಲ್ದಾಣದಲ್ಲಿ ರೈಲುಗಳ ಸುಗಮ ಮತ್ತು ಸಕಾಲಕ್ಕೆ ಸಂಚರಿಸುವ ದೃಷ್ಟಿಯಿಂದ ಹೆಚ್ಚುವರಿಯಾಗಿ ಎರಡು ಪ್ಲಾಟ್‌ಫಾರಂಗಳನ್ನು ನಿರ್ಮಿಸಬೇಕೆಂದು ಆಗ್ರಹಿಸಿದರು.

ವೈ.ಯಮುನೇಶ್, ಜಿ.ಉಮಾಮಹೇಶ್ವರ್, ಮಹೇಶ್ ಕುಡುತಿನಿ, ಕೌತಾಳ್ ವಿಶ್ವನಾಥ್, ಎಲ್.ರಮೇಶ್ ಲಮಾಣಿ, ಸಿದ್ದಪ್ಪ.ಕೆ, ಬಿ.ವಿರುಪಾಕ್ಷಪ್ಪ, ಪಿ.ಪ್ರಭಾಕರ್, ಡಿ.ರಾಮಕೃಷ್ಣ, ಎಂ.ಶಂಕ್ರಪ್ಪ, ಕೆ.ವಿ.ರಾಮಾಲಿ, ಮಲ್ಲಯ್ಯ, ಹೆಚ್.ಮಹೇಶ್, ನಜೀರ್ ಸಾಬ್, ಶಂಶುದ್ದೀನ್, ಬಿ.ಮಹಮ್ಮದ್ ಜಮೀರ್, ಯು.ಆಂಜನೇಯಲು, ಹೆಚ್.ತಿಪ್ಪೇಸ್ವಾಮಿ, ಲೋಗನಾಥನ್, ಎಸ್.ಟಿ.ಮುಂಡರಗಿ, ಡಿ.ಜಗದೀಶ್, ಶೇಕ್‌ಮಹಮ್ಮದ್ ಬಾಷಾ, ಸಣ್ಣ ಮಾರೆಪ್ಪ, ದೇವರೆಡ್ಡಿ, ಮಹಾಂತೇಶ್, ಜೆ.ವರುಣ್, ಇತರರು ಇದ್ದರು.

## ಕೊಟ್ಟೂರು ಪಪಂ ಅಧ್ಯಕ್ಷರಾಗಿ ಕಾಂಗ್ರೇಸ್‌ನ ಬಿ.ರೇಖಾ, ಉಪಾಧ್ಯಕ್ಷರಾಗಿ ಬಿಜೆಪಿ ಸಿದ್ದಯ್ಯ ಅವಿರೋಧ ಆಯ್ಕೆ

**ಹಂಪಿ ಟೈಮ್ಸ್ ಕೊಟ್ಟೂರು**

ಕೊಟ್ಟೂರು ಪಟ್ಟಣ ಪಂಚಾಯತಿ ಅಧ್ಯಕ್ಷ ಸ್ಥಾನಕ್ಕೆ ಎಸ್.ಸಿ. ಸಮುದಾಯದ ಕಾಂಗ್ರೇಸ್‌ನ ಬಿ. ರೇಖಾ, ಉಪಾಧ್ಯಕ್ಷ ಸ್ಥಾನಕ್ಕೆ ಸಾಮಾನ್ಯ ವರ್ಗದ ಬಿಜೆಪಿಯ ಸಿದ್ದಯ್ಯ ನಾಮಪತ್ರ ಸಲ್ಲಿಸಿದ್ದು, ಬೇರೆ ಯಾವ ಸದಸ್ಯರು ನಾಮ ಪತ್ರ ಸಲ್ಲಿಸದ ಕಾರಣ ಚುಣಾವಣಾ ಅಧಿಕಾರಿಯಾಗಿದ್ದ ಜಿ.ಕೆ. ಅಮರೇಶ ಇವರ ಅವಿರೋಧ ಆಯ್ಕೆಯನ್ನು ಶನಿವಾರ ಘೋಷಿಸಿದರು.

ಪಟ್ಟಣ ಪಂಚಾಯಿತಿಯ ಒಟ್ಟು 20 ಸದಸ್ಯರಲ್ಲಿ ಅಧ್ಯಕ್ಷರು ಮತ್ತು ಉಪಾಧ್ಯಕರು ಸೇರಿ ಒಟ್ಟು 16 ಸದಸ್ಯರು ಆಯ್ಕೆಯ ಸಭೆಗೆ ಹಾಜರಿದ್ದರು. ಜೆಡಿಎಸ್ ಶಾಸಕ ನೇಮಿರಾಜ್ ನಾಯ್ಕ ಅವರೊಂದಿಗೆ ಗುರುತಿಸಿಕೊಂಡಿದ್ದಾರೆ ಎನ್ನಲಾದ ಅಧ್ಯಕ್ಷ ಸ್ಥಾನದ ಆಕಾಂಕ್ಷಿ ಕೆ. ಹನುಮವ್ವ, ಕಾಂಗ್ರೇಸ್‌ನಿಂದ ಈ ಹಿಂದೆ ಪಪಂ ಅಧ್ಯಕ್ಷೆಯಾಗಿದ್ದ ಭಾರತೀ ಪಾಟೇಲ್, ಹಾಗೂ ಸದಸ್ಯರಾದ ಕೆ. ಶೈಲಜಾ, ಪಕ್ಷೇತರ ಸದಸ್ಯ ಶಿವಾನಂದ ಬಾವಿಕಟ್ಟಿ ಸಭೆಗೆ ಗೈರಾಗಿದ್ದರು. ಕಾಂಗ್ರೆಸ್ ಬಿಜೆಪಿ ಮೇಲ್ನೋಟಕ್ಕೆ ಹೊಂದಾಣಿಕೆಯಿಂದ ಆಡಳಿತ ಚುಕ್ಕಾಣಿ ಹಿಡಿದಿದೆ ಎನ್ನಲಾಗುತ್ತಿದ್ದು, ಶಾಸಕ ನೇಮಿರಾಜ ನಾಯ್ಕರ ಮೌನ ಹಲವು ಪ್ರಶ್ನೆಗಳನ್ನು ಹುಟ್ಟುಹಾಕಿದೆ.

## SSLC ಈ ಬಾರಿ ಫಲಿತಾಂಶ ನಮ್ಮದೆ ಹೈ ಸ್ಕೋರ್‌ಗೆ ಈಗಿಂದಲೇ ಅಭ್ಯಾಸ ಮಾಡಿ

Hampi Times Margadarshi | ಮನಸ್ಸು ಮಾಡು – ಕರ್ತವ್ಯ ನಿಷ್ಠನಾಗು – ಕಾದು ನೋಡು

ಹಂಪಿ ಟೈಮ್ಸ್ ಇ-ಪೇಪರ್‌ಗಾಗಿ ಭೇಟಿ ನೀಡಿ: https://epaper.hampitimes.com

ಹಂಪಿ ಟೈಮ್ಸ್ ಮಾರ್ಗದರ್ಶಿ SSLC: ಸಮಾಜ ವಿಜ್ಞಾನ

www.hampitimes.com - Hampi Times Margadarshi

### ಭೂಗೋಳ ಶಾಸ್ತ್ರ

### ಅಧ್ಯಾಯ-11 ಭಾರತದ ಋತುಗಳು

**1) ಭಾರತವು ಯಾವ ಬಗೆಯ ವಾಯುಗುಣ ಹೊಂದಿದೆ?**
ಉತ್ತರ:- ಭಾರತವು ಉಷ್ಣವಲಯದ ಮಾನ್ಸೂನ್ ಮಾದರಿ ವಾಯುಗುಣ ಹೊಂದಿದೆ

**2) ಭಾರತದಲ್ಲಿ ಅತಿ ಹೆಚ್ಚು ಮಳೆ ಪಡೆಯುವ ಸ್ಥಳ ಯಾವುದು?**
ಉತ್ತರ:- ಮಾಸಿನ್ ರಾಮ್

**3) ಭಾರತದಲ್ಲಿ ಅತಿ ಕಡಿಮೆ ಮಳೆ ಪಡೆಯುವ ಪ್ರದೇಶ ಯಾವುದು?**
ಉತ್ತರ:- ರಾಜಸ್ಥಾನದ ರೂಯ್ಲಿ

**4) ಭಾರತದಲ್ಲಿ ಅತಿ ಹೆಚ್ಚು ಉಷ್ಣಾಂಶ ಹೊಂದಿರುವ ಸ್ಥಳ ಯಾವುದು?**
ಉತ್ತರ:- ಗಂಗಾನಗರ

**5) ಭಾರತವು ಅತಿ ಹೆಚ್ಚು ಮಳೆ ಪಡೆಯುವ ಅವಧಿ ಯಾವುದು?**
ಉತ್ತರ:- ಮಳೆಗಾಲ

**6) ಭಾರತವು ಅತಿ ಕಡಿಮೆ ಮಳೆ ಪಡೆಯುವ ಅವಧಿ ಯಾವುದು?**
ಉತ್ತರ:- ಚಳಿಗಾಲ

**7) ನೈರುತ್ಯ ಮಾನ್ಸೂನ್ ಮಾರುತದ ಎರಡು ಕವಲುಗಳು ಯಾವುವು?**
ಉತ್ತರ:- 1) ಅರಬ್ಬಿ ಸಮುದ್ರ ಶಾಖೆ 2) ಬಂಗಾಳಕೊಲ್ಲಿ ಶಾಖೆ

**8) ಪರಿಸರಣ ಮಳೆ ಎಂದರೇನು?**
ಉತ್ತರ:- ಸ್ಥಳೀಯ ಉಷ್ಣಾಂಶ ಮತ್ತು ಪ್ರಚಲನ ಪ್ರವಾಹದಿಂದ ಏಪ್ರಿಲ್ ಮೇ ತಿಂಗಳಲ್ಲಿ ಉಂಟಾಗುವ ಮಳೆ.

**9) ಭಾರತದ ವಾಯುಗುಣದ ಮೇಲೆ ಪ್ರಭಾವ ಬೀರುವ ಅಂಶಗಳು ಯಾವುವು?**
ಉತ್ತರ:- ಅಕ್ಷಾಂಶ, ಸಮುದ್ರ ಮಟ್ಟದಿಂದ ಇರುವ ಎತ್ತರ, ಸಾಗರಗಳಿಂದ ಇರುವ ದೂರ, ಮಾರುತಗಳ ದಿಕ್ಕು, ಭೂ ಸ್ವರೂಪ ಮತ್ತು ಪರ್ವತ ಸರಣಿ

**10) ಪರಿಸರಣ ಮಳೆಯನ್ನು ಯಾವ ಯಾವ ಹೆಸರಿನಿಂದ ಕರೆಯಲಾಗಿದೆ?**
ಉತ್ತರ:-1 ಪಶ್ಚಿಮ ಬಂಗಾಳ -- ಕಾಲ ಬೈಸಾಕಿ
2 ಉತ್ತರ ಪ್ರದೇಶ -- ಆಂಡೀಸ್
3 ಕರ್ನಾಟಕ -- ಕಾಫಿಯ ತುಂತುರು
4 ಕೇರಳ -- ಮಾವಿನ ಹೊಯ್ಲು

**11) ಭಾರತದ ವಾಯುಗುಣದ ಪ್ರಮುಖ ಋತುಗಳು ಯಾವುವು?**
ಉತ್ತರ:- 1. ಬೇಸಿಗೆಕಾಲ 2 ಮಳೆಗಾಲ
3.ಮಾನ್ಸೂನ್ ಮಾರುತಗಳ ನಿರ್ಗಮನ ಕಾಲ 4.ಚಳಿಗಾಲ

**12) ಭಾರತದ ವ್ಯವಸಾಯ ಮಾನ್ಸೂನ್ ಮಾರುತಗಳೊಡನೆ ಆಡುವ ಜೂಜಾಟ ಚರ್ಚಿಸಿ.**
ಉತ್ತರ:- ಭಾರತದ ಜನತೆಯ ಪ್ರಧಾನ ಉದ್ಯೋಗ ಕೃಷಿ, ಮಾನ್ಸೂನ್ಮಾರುತಗಳು ದೇಶದ ವ್ಯವಸಾಯವನ್ನು ನಿಯಂತ್ರಿಸುತ್ತವೆ,
* ಮಳೆ ವಿಫಲವಾದರೆ ಬರಗಾಲ ಬರುತ್ತದೆ
* ಮಳೆ ಹೆಚ್ಚಾದರೆ ಪ್ರವಾಹ ಉಂಟಾಗಿ ಬೆಳೆ ಆಸ್ತಿ-ಪಾಸ್ತಿ ನಾಶ.

### ಅಧ್ಯಾಯ:12 ಭಾರತದ ಮಣ್ಣುಗಳು

**1) ಡೆಕ್ಕನ್ ಟ್ರಾಪ್ ಪ್ರದೇಶದಲ್ಲಿ ಕಂಡುಬರುವ ಮಣ್ಣು ಯಾವುದು ?**
ಉತ್ತರ:- ಕಪ್ಪು ಮಣ್ಣು

**2) ರಾಜಸ್ಥಾನದಲ್ಲಿ ಹೆಚ್ಚಾಗಿ ಕಂಡುಬರುವ ಮಣ್ಣು ಯಾವುದು ?**
ಉತ್ತರ:- ಮರುಭೂಮಿ ಮಣ್ಣು

**3) ನದಿಗಳು ಪರ್ವತ ಪ್ರದೇಶಗಳಿಂದ ಸಂಚಯನಗೊಂಡ ಮಣ್ಣು ಯಾವುದು ?**
ಉತ್ತರ:- ಮೆಕ್ಕಲು ಮಣ್ಣು

**4) ಮಣ್ಣುಗಳು ಮತ್ತು ಅವುಗಳಲ್ಲಿ ಬೆಳೆಯುವ ಬೆಳೆಗಳು ಯಾವುವು?**
* ಕಪ್ಪು ಮಣ್ಣು - ಹತ್ತಿ, ಜೋಳ
* ಮೆಕ್ಕಲು ಮಣ್ಣು- ಗೋಧಿ ಮತ್ತು ಭತ್ತ
* ಕೆಂಪು ಮಣ್ಣು-ರಾಗಿ ಮತ್ತು ಹೊಗೆ ಸೊಪ್ಪು
* ಮರುಭೂಮಿ ಮಣ್ಣು-ಸಜ್ಜೆ ಮತ್ತು ಖರ್ಜೂರ
* ಪರ್ವತ ಮಣ್ಣು- ಚಹಾ ಮತ್ತು ಕಾಫಿ.

**5) ಮಣ್ಣಿನ ಸವೆತ ಎಂದರೇನು?**
ಉತ್ತರ:- ಭೂ ಮೇಲ್ಮೈಯಲ್ಲಿ ಕಂಡುಬರುವ ಸಡಿಲವಾದ ಪದರವು ವಿವಿಧ ಪ್ರಾಕೃತಿಕ ಶಕ್ತಿಗಳಿಂದ ಸ್ಥಳಾಂತರ ಹೊಂದುವ ಕ್ರಿಯೆಯನ್ನು ಮಣ್ಣಿನ ಸವೆತ ಎನ್ನುವರು.

**6) ಮಣ್ಣಿನ ವಿಧಗಳು ಮತ್ತು ರಚನೆಗೆ ಕಾರಣಗಳನ್ನು ತಿಳಿಸಿ**
ಉತ್ತರ:- 1. ಮೆಕ್ಕಲು ಮಣ್ಣು-ನದಿ ಪರ್ವತಗಳಿಂದ ಹೊತ್ತು ತಂದ ಮಣ್ಣು
2. ಕಪ್ಪು ಮಣ್ಣು- ಅಗ್ನಿಶಿಲೆಗಳ ಶಿಥಿಲೀಕರಣದಿಂದ ಉಂಟಾಗಿದೆ
3. ಕೆಂಪು ಮಣ್ಣು - ಕಬ್ಬಿಣದ ಆಕ್ಸೈಡ್‌ನಿಂದ ನಿರ್ಮಾಣವಾಗಿದೆ.
4. ಜಂಬಿಟ್ಟಿಗೆ ಮಣ್ಣು-ಹೆಚ್ಚು ಮಳೆ ಬೀಳುವ ಪ್ರದೇಶದಲ್ಲಿ ನಿರ್ಮಾಣವಾದ ಮಣ್ಣು
5. ಪರ್ವತ ಮಣ್ಣು - ಕೊಳೆತ ಜೈವಿಕಾಂಶದಿಂದ ನಿರ್ಮಾಣವಾದ ಮಣ್ಣು.

**7) ಮಣ್ಣಿನ ಸವೆತಕ್ಕೆ ಕಾರಣಗಳು ಯಾವುವು?**
ಉತ್ತರ:- * ಅರಣ್ಯ ನಾಶ, * ಹೆಚ್ಚು ಮೇಯಿಸುವುದು, * ಅವೈಜ್ಞಾನಿಕ ಬೇಸಾಯ, * ಅಧಿಕ ನೀರಾವರಿ ಬಳಕೆ.

8) ಮಣ್ಣಿನ ಸವೆತದ ಪರಿಣಾಮಗಳನ್ನು ತಿಳಿಸಿ?
ಉತ್ತರ:- * ಪ್ರವಾಹ ಉಂಟಾಗುವುದು * ನದಿ ಪಾತ್ರ ಬದಲಾವಣೆ, * ಜಲಾಶಯಗಳಲ್ಲಿ ನೀರಿನ ಸಂಗ್ರಹ ಸಾಮರ್ಥ್ಯ ಕಡಿಮೆಯಾಗುವುದು * ವ್ಯವಸಾಯದ ಮೇಲೆ ದುಷ್ಪರಿಣಾಮ.

**9) ಮಣ್ಣಿನ ಸಂರಕ್ಷಣೆಯ ವಿಧಾನಗಳು ಯಾವುವು?**
ಉತ್ತರ:- * ಇಳಿಜಾರಿಗೆ ಅಡ್ಡಲಾಗಿ ಉಳುಮೆ ಮಾಡುವುದು * ಅಡ್ಡ ಬದುಗಳ ನಿರ್ಮಾಣ ಮಾಡುವುದು * ಅತಿಯಾಗಿ ಮೇಯಿಸುವುದನ್ನು ನಿಯಂತ್ರಿಸುವುದು * ಹಂತ ಹಂತ ವ್ಯವಸಾಯ ಕ್ಷೇತ್ರ ನಿರ್ಮಾಣ * ಅರಣ್ಯ ನಾಶ ತಡೆಗಟ್ಟುವುದು * ಅರಣ್ಯ ಬೆಳವಣಿಗೆಯನ್ನು ಪ್ರೋತ್ಸಾಹಿಸುವುದು * ನೀರಿನ ಯೋಜಿತ ಬಳಕೆ, * ಚೆಕ್ ಡ್ಯಾಮ್ ನಿರ್ಮಾಣ

ಮಾರ್ಗದರ್ಶಿ ಶಿಕ್ಷಕರು : **ಕೊಟ್ರೇಶ್ ಮಾಳಿಗಿ, ಸಮಾಜ ವಿಜ್ಞಾನ ಶಿಕ್ಷಕರು,** ಬ್ಯಾಸಿಗಿದೇರಿ, ಹ.ಬೊ.ಹಳ್ಳಿ (ತಾ) ವಿಜಯನಗರ (ಜಿಲ್ಲೆ)

ಕ.ರಾ.ಮಕ್ಕಳ ಸಾಹಿತ್ಯ ಪರಿಷತ್, ವಿಜಯನಗರ ಜಿಲ್ಲೆ


HAPPY TEACHERS DAY
ಶಿಕ್ಷಕರೊಂದಿಗೆ ಭಾವಚಿತ್ರ

ನಿಮ್ಮ ನೆಚ್ಚಿನ ಶಿಕ್ಷಕರೊಂದಿಗಿನ ಭಾವಚಿತ್ರ ಇದೆಯಾ ?
ಹಾಗಿದ್ದಲ್ಲಿ ಹಂಪಿ ಟೈಮ್ಸ್‌ಗೆ ಕಳಿಸಿಕೊಡಿ
ಶಿಕ್ಷಕರ ದಿನಾಚರಣೆಯಂದು ಪೋಟೊಗಳು ಪ್ರಕಟಗೊಳ್ಳಲಿವೆ
ಪ್ರತಿ ಫೋಟೋಕ್ಕೆ ಕೇವಲ ರೂ.150/-
M: 94486 33038
e-mail: hampitimes@gmail.com



ಸೆ.5ರಂದು ಪತ್ರಿಕೆಯಲ್ಲಿ ಪ್ರಕಟವಾಗಲಿವೆ...
ನಂ 1 ಜಿಲ್ಲಾಮಟ್ಟದ ದಿನಪತ್ರಿಕೆ
ಹಂಪಿ ಟೈಮ್ಸ್ ವಿಜಯನಗರದ ಹೆಮ್ಮೆ ಕನ್ನಡ ದಿನಪತ್ರಿಕೆ
ಡಿಜಿಟಲ್ E-Paper ಈಗ ವಿಶ್ವವ್ಯಾಪಿ
PhonePe 9448633038
www.hampitimes.com / https://epaper.hampitimes.com
ಮುಂಚಿತವಾಗಿ ಬುಕ್ ಮಾಡಿ, ಅವಕಾಶ ನಿಮ್ಮದಾಗಿಸಿಕೊಳ್ಳಿ!

# ವಿಜ್ಞಾನ

## ಮೋಡಭರಿತ ರಾತ್ರಿಗಳು ಏಕೆ ಬೆಚ್ಚಗಿರುತ್ತವೆ?

■ **ಆರ್.ಬಿ.ಗುರುಬಸವರಾಜ**

ಮಳೆಗಾಲದ ಸಂಜೆ ಜೋರಾಗಿ ಮಳೆ ಸುರಿದಿತ್ತು. ವಿದ್ಯುತ್ ಕಡಿತಗೊಂಡಿತ್ತು. ರಾತ್ರಿಯಾದರೂ ವಿದ್ಯುತ್ ಬರಲಿಲ್ಲ. ಆಗಸದಲ್ಲಿ ಮೋಡಗಳು ದಟ್ಟೈಸಿದ್ದವು. ಆದರೆ ಮಳೆ ಬರುವ ಮುನ್ಸೂಚನೆ ಇರಲಿಲ್ಲ. ವಾತಾವರಣವೆಲ್ಲ ತುಂಬಾ ಬಿಸಿಯಿಂದ ಕೂಡಿತ್ತು. ಸೆಕೆ ಹೆಚ್ಚಾಗಿತ್ತು. ಸೆಕೆ ನಿವಾರಿಸಿಕೊಳ್ಳಲು ಅಜ್ಜಿಯ ಜೊತೆಗೆ ಪ್ರೇಮ ಮನೆಯ ಹೊರಜಗಲಿ ಮೇಲೆ ಕುಳಿತಿದ್ದಳು. ಮನೆಯ ಹೊರಗೆ ಕುಳಿತರೂ ತುಂಬಾ ಸೆಕೆ ಇತ್ತು. ಈ ಸನ್ನಿವೇಶ ಗಮನಿಸಿದ ಪ್ರೇಮಳ ಮನಸ್ಸಿನಲ್ಲಿ ಪ್ರಶ್ನೆಯೊಂದು ಮೂಡಿತು. ತಕ್ಷಣ ಅಜ್ಜಿಗೆ ಕೇಳಿದಳು. "ಅಜ್ಜಿ ಮೋಡಭರಿತ ರಾತ್ರಿಗಳು ಏಕೆ ಸಾಮಾನ್ಯ ದಿನಗಳಿಗಿಂತ ಬೆಚ್ಚಗಿರುತ್ತವೆ?" ಎಂದಳು. ಅಜ್ಜಿಯು ತನ್ನ ಅನುಭವದ ಹಿನ್ನೆಲೆಯಲ್ಲಿ ಮೊಮ್ಮಗಳ ಪ್ರಶ್ನೆಗೆ ಉತ್ತರಿಸಿದಳು.

ಸಾಮಾನ್ಯವಾಗಿ ಮೋಡಭರಿತ ರಾತ್ರಿಗಳು ಸಾಮಾನ್ಯ ರಾತ್ರಿಗಳಿಗಿಂತ ಬೆಚ್ಚಗಿರುತ್ತದೆ. ಏಕೆಂದರೆ ಮೋಡಗಳು ಭೂಮಿಗೆ ಕಂಬಳಿ ಹೊದಿಕೆಯಂತೆ ಕಾರ್ಯನಿರ್ವಹಿಸುತ್ತವೆ. ಹಗಲಿನಲ್ಲಿ ಭೂಮಿಯ ಮೇಲ್ಮೈಯಿಂದ ಹೊರಸೂಸಲ್ಪಟ್ಟ ಶಾಖವನ್ನು ಹಿಡಿದಿಟ್ಟುಕೊಳ್ಳುತ್ತವೆ.



ಮೋಡಗಳು ಸಣ್ಣ ನೀರಿನ ಹನಿಗಳು ಅಥವಾ ಮಂಜುಗಡ್ಡೆಯ ಸ್ಫಟಿಕಗಳಿಂದ ಮಾಡಲ್ಪಟ್ಟಿವೆ. ಈ ಕಣಗಳು ಶಾಖವನ್ನು ಹೀರಿಕೊಳ್ಳುತ್ತವೆ ಮತ್ತು ಮರು ಹೊರಸೂಸುತ್ತವೆ. ಇದರಿಂದ ರಾತ್ರಿಯಲ್ಲಿ ಭೂಮಿಯ ಮೇಲ್ಮೈ ಬೆಚ್ಚಗಿರುತ್ತದೆ. ಮೋಡರಹಿತ ರಾತ್ರಿಯಲ್ಲಿ ಹಗಲಿನಲ್ಲಿ ಭೂಮಿಯ ಮೇಲ್ಮೈಯಿಂದ ಹೊರಸೂಸಲ್ಪಟ್ಟ ಶಾಖವನ್ನು ಹಿಡಿದಿಡಲು ಮೋಡಗಳಿರುವುದಿಲ್ಲ. ಆದ್ದರಿಂದ ಶಾಖವು ವಾತಾವರಣಕ್ಕೆ ಮರು ಹೊರಸೂಸುವುದಿಲ್ಲ. ಪರಿಣಾಮವಾಗಿ ಮೋಡರಹಿತ ರಾತ್ರಿಗಳು ತಣ್ಣಗಿರುತ್ತವೆ.

ಮತ್ತೊಂದೆಡೆ ಮೋಡ ಕವಿದ ರಾತ್ರಿಗಳಲ್ಲಿ ಮೋಡಗಳು ನಿರೋಧನವಾಗಿ ಕಾರ್ಯನಿರ್ವಹಿಸುತ್ತವೆ. ನೆಲದಿಂದ ಶಾಖವನ್ನು ಕಳೆದುಕೊಳ್ಳುವ ದರವನ್ನು ನಿಧಾನಗೊಳಿಸುತ್ತವೆ. ಇದರರ್ಥ ತಾಪಮಾನವು ನಿಧಾನವಾಗಿ ಇಳಿಯುತ್ತದೆ. ಪರಿಣಾಮವಾಗಿ ಮೋಡಕವಿದ ರಾತ್ರಿಯು ಸಾಮಾನ್ಯ ರಾತ್ರಿಗಿಂತ ಬೆಚ್ಚಗಿರುತ್ತದೆ.

ಒಟ್ಟಾರೆಯಾಗಿ ಮೋಡಗಳ ಉಪಸ್ಥಿತಿಯು ಒಂದು ರೀತಿಯ ಇನ್ಸುಲೇಟರ್ ಆಗಿ ಕಾರ್ಯನಿರ್ವಹಿಸುತ್ತದೆ. ರಾತ್ರಿಯಲ್ಲಿ ಭೂಮಿಯ ಮೇಲ್ಮೈಯನ್ನು ಬೆಚ್ಚಗಿಡುತ್ತವೆ. ಇದರಿಂದ ವಾತಾವರಣದಲ್ಲಿ ಸೆಕೆಯ ಅನುಭವ ಆಗುತ್ತದೆ.

### ಮಕ್ಕಳು ಅರಸರಾಗಬೇಕೆ?

ಓದಲು ಸಮಯವಿಲ್ಲವೆಂದು ಪತ್ರಿಕೆಯನ್ನು ಕೈ ಬಿಡಬಾರದು, ಕನ್ನಡ ಪತ್ರಿಕೆಯೊಂದು ಕೈಯಲ್ಲಿಡಿದರೆ, ಹಿರಿಯರನ್ನು ಅನುಸರಿಸುವ ಮಕ್ಕಳು ಮೊಬೈಲ್ ಬಿಟ್ಟು ಅಕ್ಷರ ದಾಸರಾಗುತ್ತಾರೆ. ಅಕ್ಷರ ದಾಸರಾದರೆ ಅರಸರು ಆಗಬಲ್ಲರಲ್ಲವೇ ?

## ನೀವೂ ಬರೆಯಬಹುದು

ಹಂಪಿ ಟೈಮ್ಸ್ ಪತ್ರಿಕೆ ಆರಂಭಿಸಿದ್ದು ನಾವಾದರೂ, ಕೈಹಿಡಿದು ನಡೆಸುವವರು ನೀವು. ನಮ್ಮ ಇಚ್ಛೆಯೂ ಒಳಗೊಂಡಂತೆ ನಿಮ್ಮ ಆಶಯಗಳಿಗೆ ತಕ್ಕಂತೆ ಪತ್ರಿಕೆಯನ್ನು ರೂಪಿಸುವ ಹೊಣೆಗಾರಿಕೆ, ಜವಾಬ್ದಾರಿಯೂ ನಮ್ಮದಾಗಿದೆ. ಇಲ್ಲಿ ಕೇವಲ ನಮ್ಮ ಬರವಣಿಗೆ ಅಷ್ಟೇ ಅಲ್ಲದೇ, ಬರಹಗಾರರಾಗಿದ್ದರೆ ನೀವೂ ಕೂಡ ನಿಮ್ಮ ಬರಹವನ್ನಿಲ್ಲಿ ಓದಬಹುದು. ಈ ನಿಟ್ಟಿನಲ್ಲಿ ನಿಮ್ಮಿಂದ ಕತೆ, ಕವನ, ವಿವಿಧ ಪ್ರಕಾರದ ಸಾಹಿತ್ಯ ಹಾಗೂ ಮಹಿಳಾ ಮತ್ತು ಮಕ್ಕಳ ಪರ ಚಿಂತನೆ ಒಳಗೊಂಡ ಲೇಖನಗಳನ್ನು ನಾವು ನಿರೀಕ್ಷಿಸುತ್ತಿದ್ದೇವೆ. ಜೊತೆಗೆ ಬಹುಮುಖ್ಯವಾಗಿ ಈ ನೆಲದ ಜನರ ಧ್ವನಿಯಾಗುವ ಹಂಬಲದಿಂದ ಸಾರ್ವಜನಿಕ ಕುಂದು ಕೊರತೆಗಳನ್ನು ಹೇಳಿಕೊಳ್ಳಬಹುದು. ಓದುಗ ಪ್ರಭುಗಳಾದ ನೀವು ಪತ್ರಿಕೆಯ ಭಾಗವೂ ಹೌದು. ಹೀಗಾಗಿ ನಿಮ್ಮ ಪ್ರತಿಕ್ರಿಯೆಯೂ ನಮಗೆ ಅತ್ಯಮೂಲ್ಯ. **ಕಥೆ, ಕವನ, ಸಾಹಿತ್ಯ, ತಂತ್ರಜ್ಞಾನ, ಆರೋಗ್ಯ, ಶಿಕ್ಷಣ, ಕ್ರೀಡೆ, ಕೃಷಿ, ಅಪರೂಪದ ವ್ಯಕ್ತಿಗಳು, ಅಂಕಣ, ಮಹಿಳೆ ಮತ್ತು ಮಕ್ಕಳು ಸೇರಿದಂತೆ ವಿವಿಧ ಕ್ಷೇತ್ರಗಳ** ಕುರಿತಾದ ನಿಮ್ಮ ಬರಹಗಳನ್ನೆಲ್ಲ ಸ್ವೀಕರಿಸುತ್ತೇವೆ ಆದರೆ, ಕಳುಹಿಸಿದ ಬರಹಗಳಲ್ಲಿ ಸಮಂಜಸ ಎನಿಸುವುದಷ್ಟೇ ಪ್ರಕಟಿಸುತ್ತೇವೆ. ನಮ್ಮ ನಂಬುಗೆಯ ಸಮಾಜಕ್ಕಾಗಿ ಒಳಿತನ್ನೇ ಬಯಸುತ್ತ, ಬರೆಯುತ್ತ ಎಲ್ಲರೂ ಒಳ ಗೊಳ್ಳೋಣ.

**ಬೆಳಕಿನ ಹಾದಿ:** ರಾಮಾಯಣ, ಮಹಾಭಾರತ, ಸಾಧು ಸಂತರು, ವಿಜ್ಞಾನಿ, ಹೀಗೆ ಪುಣ್ಯ ಪುರುಷರ ಜೀವನದಲ್ಲಿ ನಡೆದ ಘಟನೆಗಳು ಅಥವಾ ನೈತಿಕ ಕಥೆಗಳನ್ನು ಬರೆದು, ಕೊನೆಗೆ ಅಂತಹ ಕಥೆಯಿಂದ ನಮಗೆ ತಿಳಿಯುವ ಮೌಲ್ಯದ ಬಗ್ಗೆ 250 ಪದಗಳ ಮಿತಿಯಲ್ಲಿ ಬೆಳಕಿನ ಹಾದಿ ವಿಭಾಗಕ್ಕೆ ಬರೆದು ಕಳುಹಿಸಿ. ಸೂಕ್ತವಿದ್ದಲ್ಲಿ ಪ್ರಕಟಿಸುತ್ತೇವೆ. ಹೊಸ ಬರಹಗಾರರಿಗೆ ಅವಕಾಶ ಸಿದ್ಧವಾಗಿದೆ.

**ಸಂಪಾದಕರು: ಹಂಪಿ ಟೈಮ್ಸ್, ಶ್ರೀ ಓಂಕಾರೇಶ್ವರ ದೇವಸ್ಥಾನದ ಪಕ್ಕದಲ್ಲಿ, ವಾಲ್ಮೀಕಿ ವೃತ್ತದ ಹತ್ತಿರ, ಹೊಸಪೇಟೆ, ವಿಜಯನಗರ ಜಿಲ್ಲೆ.**
ಇ-ಮೇಲ್:hampitimes@gmail.com
M: 94486 33038

## ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತುಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರ ರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
– ಜಾಹೀರಾತು ವ್ಯವಸ್ಥಾಪಕರು.

# ಭಾರತೀಯ ನೃತ್ಯ ಕಲೆಯ ರಾಯಭಾರಿ ದಂಪತಿಗಳು ಗುರು ಹರಿ ಮತ್ತು ಚೇತನ ಹರಿ

ಆಂಧ್ರಪ್ರದೇಶದ ಪ್ರಕಾಶಂ ಜಿಲ್ಲೆಯ ಮಾರ್ಕಾಪುರಂ ಎಂಬ ಊರಿನಿಂದ ವಲಸೆ ಬಂದ ಸಂಪ್ರದಾಯಸ್ತ ಕೂಡು ಕುಟುಂಬದ ಕುಡಿ ನಮ್ಮ ಇಂದಿನ ಕಥಾನಾಯಕ ಗುರು ಹರಿ. "ಸತಿಪತಿಗಳೊಂದಾದ ಭಕ್ತಿಯು ಹಿತವಪ್ಪುದು ಶಿವಂಗೆ" ಎಂಬ ಮಾತಿನಂತೆ ಕಲಾ ಸಾಧಕ ಗುರು ಹರಿ ಅವರ ಕಲಾಸಾಂಗತ್ಯ ಮತ್ತು ಜೀವನಯಾನಕ್ಕೆ ಜೊತೆಯಾಗಿದ್ದು ಚೇತನ ಎಂಬ ಕಲೋಪಾಸಕಿ.

ದಂಡೆ ಸುಬ್ಬರಾಮಿ ರೆಡ್ಡಿ ಮತ್ತು ರಮಣಮ್ಮ ದಂಪತಿಗಳ ಆರು ಜನ ಮಕ್ಕಳಲ್ಲಿ ಮೂರು ಜನ ಅಕ್ಕಂದಿರು, ಓರ್ವ ಅಣ್ಣನ ನಂತರ ಹುಟ್ಟಿದ ಹರಿ ಅವರು ಓರ್ವ ತಮ್ಮ ಮತ್ತು ತಂಗಿಯನ್ನು ಹೊಂದಿದ್ದರು.ತಂದೆಯವರಿಗೆ ಬೆಂಗಳೂರಿನ ಹೆಚ್‌ಎಎಲ್ ನಲ್ಲಿ ಉದ್ಯೋಗ ದೊರೆತ ಕಾರಣ ಇಡೀ ಕುಟುಂಬ ಬೆಂಗಳೂರಿನ ಜಯನಗರ ಬಡಾವಣೆಗೆ ಸ್ಥಳಾಂತರಗೊಂಡಿತು.

ತಂದೆಯವರು ಸಾಯಂಕಾಲ ಕೆಲಸಕ್ಕೆ ಹೋಗುತ್ತಿದ್ದುದರಿಂದ ಬಿಡುವಾಗಿರುತ್ತಿದ್ದ ಅವರ ತಾಯಿ ರಮಣಮ್ಮ ತಮ್ಮೆಲ್ಲ ಮಕ್ಕಳನ್ನು ಹತ್ತಿರದ ಶಿವ ಬಾಲಯೋಗಿ ಸ್ವಾಮೀಜಿಯವರ ಆಶ್ರಮಕ್ಕೆ ಕರೆದೊಯ್ಯುತ್ತಿದ್ದರು. ಅಲ್ಲಿ ಪ್ರತಿದಿನ ಪೂಜೆ, ಪ್ರವಚನ, ಪುರಾಣ, ಪುಣ್ಯ ಕಥೆಗಳ ಶ್ರವಣಗಳು ನಡೆಯುತ್ತಿದ್ದು ಇದು ಮಕ್ಕಳಲ್ಲಿ ಧಾರ್ಮಿಕ ಮನೋಭಾವವನ್ನು ಉಂಟು ಮಾಡಿತ್ತು. ಆಶ್ರಮದಲ್ಲಿ ನಡೆಯುವ ಮಹಾ ಮಂಗಳಾರತಿಯ ಸಮಯದಲ್ಲಿ ಬಾಲಕ ಹರಿ ಗಂಟೆ ಜಾಗಟೆಗಳ ಸದ್ದಿಗೆ ರೋಮಾಂಚನಗೊಳ್ಳುತ್ತಿದ್ದು ಆತನ ಕಾಲುಗಳು ತನ್ನಂತಾನೆ ತಾಳಕ್ಕೆ ತಕ್ಕಂತೆ ಹೆಜ್ಜೆ ಹಾಕುತ್ತಿದ್ದವು. ಕುಟುಂಬದ ಎಲ್ಲ ಸದಸ್ಯರು ಆಗಾಗ ಶ್ರೀಶೈಲ, ಧರ್ಮಸ್ಥಳ ತಿರುಪತಿಗೆ ದೈವ ದರ್ಶನಕ್ಕೆ ಹೋಗುತ್ತಿದ್ದರು.

ಒಳ್ಳೆಯ ರಂಗ ಕಲಾವಿದರು ಆಗಿದ್ದ ಅವರ ತಂದೆ, ವಿಜ್ಞಾನ ಮತ್ತು ಗಣಿತ ವಿಷಯಗಳಲ್ಲಿ ಪ್ರಕಾಂಡ ಪಾಂಡಿತ್ಯವನ್ನು ಹೊಂದಿದ್ದರಲ್ಲದೆ ಕನ್ನಡ, ತೆಲುಗು, ಮಲಯಾಳಂ,ತಮಿಳು ಮತ್ತು ಸಂಸ್ಕೃತ ಭಾಷಾ ಪರಿಣತರಾಗಿದ್ದರು. ಮನೆಯಲ್ಲಿ ಕೈದೋಟ, ಹಸು ಸಾಕಣೆ, ಧಾರ್ಮಿಕ ಕಾರ್ಯಕ್ರಮಗಳು ಪಠ್ಯ ಮತ್ತು ಪಠ್ಯೇತರ ಚಟುವಟಿಕೆಗಳಲ್ಲಿ ತಮ್ಮ ಮಕ್ಕಳನ್ನು ತೊಡಗಿಸಿದ್ದ ಸುಬ್ಬರಾಮಿ ರೆಡ್ಡಿ ಮತ್ತು ರಮಣಮ್ಮ ದಂಪತಿಗಳು ಮಕ್ಕಳ ಸರ್ವತೋಮುಖ ಬೆಳವಣಿಗೆಯಲ್ಲಿ ಬಹು ಮುಖ್ಯ ಪಾತ್ರವನ್ನು ವಹಿಸಿದ್ದರು.



ತಾಯಿಯೊಂದಿಗೆ ಸಂಗೀತ ಮತ್ತು ನೃತ್ಯ ಕಲೆಗಳನ್ನು ಒಳಗೊಂಡ ಶಂಕರಾಭರಣಂ, ಸಾಗರಸಂಗಮಂ, ಸ್ವರ್ಣ ಕಮಲ ಮತ್ತು ಭಕ್ತ ಸಿರಿಯಾಳದಂತಹ ಚಿತ್ರಗಳನ್ನು ಸಿನಿಮಾ ಥಿಯೇಟರ್ಗಳಲ್ಲಿ ನೋಡಿದ ಬಾಲಕ ಹರಿ ನೃತ್ಯದೆಡೆಗೆ ಆಕರ್ಷಿತನಾದನು.ಮುಂದೆ ಭರತನಾಟ್ಯ, ಕುಚಿಪುಡಿ, ಯಕ್ಷಗಾನ ಮತ್ತು ಕಥಕ್ ನೃತ್ಯಗಳಲ್ಲಿ ಪರಿಣತಿಯನ್ನು ಸಾಧಿಸಿದ ಹರಿ ಅದೆಂತ ಎಡರು ತೊಡರುಗಳು ಬಂದರೂ ಅಚಲ ಶ್ರದ್ಧೆ ಮತ್ತು ಬದ್ಧತೆಯಿಂದ ನೃತ್ಯ ಉಪಾಸನೆಯಲ್ಲಿ ತೊಡಗಿದರು.ಕಲಿಯುವ ಸಮಯದಲ್ಲಿ ಸಂಪೂರ್ಣ ನಿಷ್ಠೆಯನ್ನು ನೃತ್ಯಕ್ಕೆ ಮೀಸಲಾಗಿಟ್ಟ ಪರಿಣಾಮವಾಗಿ ಅಂತರಾಷ್ಟ್ರೀಯ ಮಟ್ಟದ ಕಲಾವಿದರಾಗಿ ರೂಪುಗೊಂಡರು.

ಕಲಾವಿದರ ಬಾಳಿನಲ್ಲಿ ಸವಾಲುಗಳು ಕೂಡ ಬಹಳ. ಅವರ ಬದುಕು ಏರು ಇಳಿತಗಳ ಹಾದಿಯಲ್ಲಿ ಸಾಗುವ ರೋಲರ್ ಕೋಸ್ಟರ್ ನಂತೆ. ಹರಿ 2000ನೇ ಇಸವಿಯಲ್ಲಿ ಹಾಡು ಮತ್ತು ನೃತ್ಯವೊಂದರ ರೆಕಾರ್ಡಿಂಗ್ನಲ್ಲಿ ನಿರತರಾಗಿದ್ದಾಗಲೇ ಅವರ ತಂದೆ ನಿಧನರಾದ ಸುದ್ದಿ ಅವರನ್ನು ತಲುಪಿತು.ತಂದೆ ಇನ್ನಿಲ್ಲವಾದ ಸುದ್ದಿಯನ್ನು ಕೇಳಿಯೂ ತಮ್ಮ ರೆಕಾರ್ಡಿಂಗ್ ಕೆಲಸವನ್ನು ಪೂರೈಸಿ, ತಂದೆಯ ಅಂತ್ಯಸಂಸ್ಕಾರಕ್ಕೆ ತೆರಳಿದ್ದು ಅವರು ಕಲೆಗೆ ನೀಡುವ ಗೌರವಾಭಿಮಾನ ಮತ್ತು ವೃತ್ತಿಯೆಡೆಗಿನ ಬದ್ಧತೆಯನ್ನು ತೋರುತ್ತದೆ. ತಂದೆಯ ಅಂತ್ಯ ಸಂಸ್ಕಾರದ ಮರುದಿನವೇ ಅವರು ಈಗಾಗಲೇ ನಿಗದಿಯಾಗಿದ್ದ ಕಾರ್ಯಕ್ರಮದಲ್ಲಿ ನೃತ್ಯ ಪ್ರದರ್ಶನ ನೀಡಿ ತನ್ನ ತಂದೆಗೆ ಶ್ರದ್ಧಾಂಜಲಿ ಅರ್ಪಿಸಿ, ಮಗನಾಗಿ ತಮ್ಮ ಕರ್ತವ್ಯವನ್ನು ನಿರ್ವಹಿಸಿದರು.

ಅವರ ಸಹ ಕಲಾವಿದೆಯಾಗಿ ಚೇತನ 1999 ರಲ್ಲಿ ಜತೆಗೂಡಿದರು. ನೃತ್ಯವನ್ನು ಆರಾಧಿಸುವ ಇವರಿಬ್ಬರ ಜೋಡಿಯು ಇವರ ನೃತ್ಯಗುರುವಾದ ಶ್ರೀಮತಿ ಉಷಾ ವೆಂಕಟರಮನ್ ಅವರ ನೃತ್ಯ ನಿರ್ದೇಶನದಲ್ಲಿ ಮುಖ್ಯ ನೃತ್ಯಪಟುಗಳಾಗಿ ಅತ್ಯಂತ ಕಲಾತ್ಮಕವಾಗಿ ಮತ್ತು ಚೈತನ್ಯಾತ್ಮಕವಾಗಿ ನೂರಾರು ಪ್ರದರ್ಶನಗಳನ್ನು ನೀಡಿದರು.



ವೀಣಾ ಹೇಮಂತಗೌಡ ಪಾಟೀಲ್
ಲೇಖಕರು, ಮುಂಡರಗಿ, ಗದಗ

Scan For Digital Colourful
HAMPI TIMES E-paper

ಇಂಡಿಯನ್ ಕೌನ್ಸಿಲ್ ಫಾರ್ ಕಲ್ಚರಲ್ ರಿಲೇಶನ್ಸ್ (ಐಸಿಸಿಆರ್) ನ ಸಹಭಾಗಿತ್ವದಲ್ಲಿ ಮಲೇಶಿಯಾ, ಥೈಲ್ಯಾಂಡ್, ಸಿಂಗಾಪುರ್, ಇಂಡೋನೇಷಿಯಾ ದೇಶಗಳಲ್ಲಿ ಸರಣಿ ಕಾರ್ಯಕ್ರಮಗಳನ್ನು ನೀಡಿದ ಇವರ ತಂಡ ನಂತರ ದುಬೈನ ಅರಸನ ಆಹ್ವಾನದ ಮೇರೆಗೆ ಬುರ್ಜ್ ಅಲ್ ಅರಬ್ ನಲ್ಲಿ ಮತ್ತು ಇಂಗ್ಲೆಂಡಿನ ಕನ್ನಡ ಬಳಗದ ಆಹ್ವಾನದ ಮೇರೆಗೆ ಅಲ್ಲಿಯೂ ನೃತ್ಯ ಪ್ರದರ್ಶನವನ್ನು ನೀಡಿದರು. ಈ ಸರಣಿ ಕಾರ್ಯಕ್ರಮಗಳ ನಡುವಲ್ಲಿಯೇ ಕೆಲವೇ ದಿನಗಳ ಬಿಡುವನ್ನು ಪಡೆದುಕೊಂಡ ಹರಿ ಮತ್ತು ಚೇತನ ಜೋಡಿಯು ಫೆಬ್ರುವರಿ 8, 2007ರಲ್ಲಿ ಭಾರತಕ್ಕೆ ಮರಳಿ ತಮ್ಮ ಪಾಲಕರು ತಮ್ಮಿಬ್ಬರ ವಿವಾಹಕ್ಕೆ ನಿಶ್ಚಯಿಸಿದ ಮುಹೂರ್ತದಲ್ಲಿ ಮದುವೆಯಾಗಿ ಮತ್ತೆ ನೃತ್ಯ ಪ್ರದರ್ಶನಕ್ಕೆ ವಿದೇಶಕ್ಕೆ ಹೊರಟದ್ದು ಕಲಾರಾಧನೆಯೇ ಅವರ ಬಾಳಿನ ಮೂಲ ಧ್ಯೇಯವಾಗಿತ್ತು ಎಂಬುದಕ್ಕೆ ನಿದರ್ಶನವಾಗಿದೆ.

ಶ್ರೀಲಂಕಾದಲ್ಲಿಯೂ ಹಲವಾರು ಬಾರಿ ನೃತ್ಯ ಪ್ರದರ್ಶಿಸಿದ ಈ ದಂಪತಿಗಳು ಮಲಯಾಳಂನಲ್ಲಿ ಖ್ಯಾತ ನಿರ್ದೇಶಕ ಲೆನಿನ್ ರಾಜೇಂದ್ರ ನಿರ್ದೇಶಿಸಿದ ಚಿತ್ರ 'ಮಕರ ಮಾನ್ಯ"ದಲ್ಲಿ ನಟಿಸಿದ್ದು ಅವರ ಬಾಳಿನ ಮತ್ತೊಂದು ಮೈಲಿಗಲ್ಲು.

2009ರಲ್ಲಿ ಸೌದಿ ಅರೇಬಿಯಾದ ದಮ್ಮಂಗೆ ನೃತ್ಯ ಪ್ರದರ್ಶನಕ್ಕೆಂದು ಅಧಿಕೃತವಾಗಿ ಆಹ್ವಾನಿಸಲ್ಪಟ್ಟ ಮೊಟ್ಟ ಮೊದಲ ಕಥಕ್ ನೃತ್ಯ ಕಲಾವಿದ ದಂಪತಿಗಳು ಇವರಾಗಿದ್ದರು.

ಚೇತನ ಅವರು ಗರ್ಭವತಿಯಾಗಿದ್ದಾಗ್ಯೂ ಕೂಡ ಸುಮಾರು ಆರು ತಿಂಗಳವರೆಗೆ ಹತ್ತಕ್ಕೂ ಹೆಚ್ಚು ಪ್ರದರ್ಶನಗಳನ್ನು ವಿದೇಶದಲ್ಲಿ ನೀಡಿದ್ದರು. 2010 ಜೂನ್ 28ರಂದು ಜಾನವಿ ಎಂಬ ಮುದ್ದಾದ



ಹೆಣ್ಣು ಕೂಸನ್ನು ಈ ದಂಪತಿಗಳು ಪಡೆದರು.

ಮಗುವಿಗೆ ಮೂರು ತಿಂಗಳಾಗಿದ್ದಾಗಲೇ ತಮ್ಮ ತಂಡದ ಹತ್ತು ಜನ ಸಹಕಲಾವಿದರೊಡನೆ ಅಮೆರಿಕಾದ ವಾಶಿಂಗ್ಟನ್ ಡಿ.ಸಿ ಗೆ ತೆರಳಿದ ದಂಪತಿಗಳು ಐ.ಸಿ.ಸಿ.ಆರ್.ನ ಸಹಯೋಗದೊಂದಿಗೆ ಕೆನಡಾದ ಒಟ್ಟಾವ ಮತ್ತು ವಿನಿ ಪೆಗ್ ಗಳಲ್ಲಿ ಭಾರತೀಯ ಸಾಂಸ್ಕೃತಿಕ ರಾಯಭಾರಿಗಳಾಗಿ ಈ ದಂಪತಿಗಳು ತಮ್ಮ ತಂಡದೊಂದಿಗೆ ನೃತ್ಯ ಪ್ರದರ್ಶನ ಮಾಡಿದರು.

2012ರಲ್ಲಿ ಅವರು ನೃತ್ಯ ಪ್ರದರ್ಶನಕ್ಕೆ ಫ್ರಾನ್ಸ್ ದೇಶಕ್ಕೆ ತೆರಳಿದಾಗ ತಾಯಿ ರಮಣಮ್ಮನವರು ವಿಯೋಗ ಹೊಂದಿದರು. ಕಾರ್ಯಕ್ರಮವನ್ನು ಬಿಟ್ಟು ಬರಲಾರದ ಸಂದಿಗ್ಧತೆಯಲ್ಲಿದ್ದ ಹರಿ ನೃತ್ಯಕ್ಕೆ ಬೇಕಾದ ಉಡುಗೆ ಮತ್ತು ಪರಿಕರಗಳನ್ನು ತೊಟ್ಟು ವೇದಿಕೆಯ ಮೇಲೆ ಬಂದಾಗ ಅವರ ತಾಯಿಯ ಚೈತನ್ಯವೇ ಅವರೊಂದಿಗೆ ನೃತ್ಯದಲ್ಲಿ ಲೀನವಾದಂತೆ ಭಾಸವಾಯಿತು. ಇಂದಿಗೂ ಸಹ ತಮ್ಮೆಲ್ಲ ಬೆಳವಣಿಗೆಗೆ ಕಾರಣವಾಗಿರುವುದು ತಮ್ಮ ತಂದೆ ತಾಯಿ ಎಂದು ಹೇಳುವ ಹರಿ ಅವರ ಕುಟುಂಬದ ಸುಮಾರು ಎಂಟು ಜನ ನೃತ್ಯ ಕಲಾವಿದರಾಗಿದ್ದಾರೆ ಎಂಬುದು ಅವರಿಗೆ ಹೆಮ್ಮೆಯ ವಿಷಯ.

2013ರಲ್ಲಿ ನೆದರ್ಲ್ಯಾಂಡ್ ನಲ್ಲಿನ ಗಾಂಧೀಸಂ ಸೆಂಟರ್ನಲ್ಲಿ ಐಸಿಸಿಆರ್ ಮತ್ತು ಭಾರತೀಯ ವಿದೇಶಾಂಗ ಇಲಾಖೆಯ ಆಯೋಗದಲ್ಲಿ ಕಥಕ್ ನೃತ್ಯ ಶಿಕ್ಷಕ ಮತ್ತು ಪ್ರದರ್ಶಕರಾಗಿ ಆಯ್ಕೆಯಾದ ಹರಿ ಅವರ ಕಲಾಯಾನದಲ್ಲಿ ಇದೊಂದು ಮಹತ್ವದ ಮೈಲಿಗಲ್ಲು.

ದಂಪತಿಗಳಿಬ್ಬರೂ ಹೇಗ್ ನ ಕೊರ್ಜೋ ಥಿಯೇಟರ್ ನಲ್ಲಿ ಲಿಯೋ ಸ್ಪೆರ್ಕಸೆಲ್ ಅವರ ಸಮರ್ಥ ನಿರ್ದೇಶನದಲ್ಲಿ ಸ್ಥಾನಿಕ ಕಲಾವಿದರಾಗಿ ಕಾರ್ಯನಿರ್ವಹಿಸಿದರು.ಇವರಿಬ್ಬರ ಜಂಟಿ ಆಯೋಜನೆಯಲ್ಲಿ ತುಂಬಿದ ಗೃಹ ಪ್ರದರ್ಶನಗಳು ನಡೆಯುತ್ತಿದ್ದವು. ಇಶಾ,ಮಾಯಾ, ಕ್ಲೌಡ್ ಮೆಸೆಂಜರ್, ಆಯುಷ್ ಸತ್ಯಾಗ್ರಹ ಮುಂತಾದ ನೃತ್ಯ ರೂಪಕಗಳು ಪ್ರದರ್ಶಿತವಾಗಿದ್ದು ಇಲ್ಲಿಯೇ. ವಿವಿಧ ವಾದ್ಯಗಳ ಸಿಂಫೋನಿ ಆರ್ಕೆಸ್ಟ್ರಾಗೆ ಕ್ಲಾಸಿಕ್ ಫೆಸ್ಟಿವಲ್ ನಲ್ಲಿ ಹೆಜ್ಜೆ ಹಾಕಿದ್ದು ಒಂದು ಅಭೂತಪೂರ್ವ ಅನುಭವ ಎಂದು ಅವರು ಹೇಳುತ್ತಾರೆ.

ಕಳೆದ ವರ್ಷಗಳಲ್ಲಿ ಕಮರೊಟ್ಟು ಭಾಗ-2.ವೇದ ಮತ್ತು ಯುದ್ಧ ಕಾಂಡ ಚಿತ್ರಗಳಲ್ಲಿ ಪಾತ್ರನಿರ್ವಹಿಸಿರುವ ಚೇತನ ನಟನೆ ಮತ್ತು ನರ್ತನ ಎರಡರಲ್ಲೂ ಸೈ ಎನಿಸಿಕೊಂಡಿದ್ದಾರೆ.

ಬಾಲಿ ಯಾತ್ರ, ಸತ್ಯಾಗ್ರಹ, ಶಾಕುಂತಲಂ ನಂತಹ ನೃತ್ಯ ನಾಟಕಗಳಲ್ಲದೆ ರಾಮಾಯಣ,ಕೃಷ್ಣಾಂಜಲಿ, ಶಿವಾಂಜಲಿ, ದೇವಿ, ಫೋಕ್ ರಿದಮ್ಸ್ ಆಫ್ ಇಂಡಿಯಾ ಎಂಬ ಹಲವಾರು ನೃತ್ಯ ರೂಪಕಗಳನ್ನು ಪ್ರದರ್ಶಿಸುವ ಮೂಲಕ ಜಗತ್ತಿನ ಗಮನವನ್ನು ಭಾರತದ ಸಾಂಸ್ಕೃತಿಕ ಜಗತ್ತಿನತ್ತ ತಿರುಗಿಸಿದ ಖ್ಯಾತಿ ಈ ದಂಪತಿಗಳದು.

2022 ರಲ್ಲಿ ಚೆನ್ನೈನಲ್ಲಿ ನಡೆದ ಫಿಡೆ 44ನೇ ಚೆಸ್ ಚಾಂಪಿಯನ್ಶಿಪ್ ನಲ್ಲಿ ತಮ್ಮ ತಂಡದ ಒಟ್ಟು 58 ಕಲಾವಿದ (ಚೈತನ್ಯ ಡ್ಯಾನ್ಸ್ ಅಕಾಡೆಮಿಯಲ್ಲಿ ಕಾರ್ಯನಿರ್ವಹಿಸಿದ ಗದುಗಿನ ಸುಧಾ ಇನಾಮ್ ದಾರ್ ಸೇರಿದಂತೆ) ರನ್ನೊಳಗೊಂಡ ಸುಮಾರು 300ಕ್ಕೂ ಹೆಚ್ಚು ಆಯ್ದ ಕಲಾವಿದರ ಎಂಟು ತಂಡಗಳನ್ನು ರಚಿಸಿ ಭಾರತೀಯ ನೃತ್ಯದ ವಿವಿಧ ಪ್ರಕಾರಗಳನ್ನು ತಲಾ ಮೂರು ನಿಮಿಷಗಳ ಕಾಲ ಪ್ರದರ್ಶಿಸಿ ಅಂತಿಮವಾಗಿ ಎರಡು ನಿಮಿಷ ಎಲ್ಲಾ ಮುನ್ನೂರು ಕಲಾವಿದರು ಒಟ್ಟಾಗಿ ನೃತ್ಯ ಮಾಡುವ ಮೂಲಕ ಸಮಾರಂಭಕ್ಕೆ ಅದ್ಭುತವಾದ ಮೆರುಗು ತಂದರು.

ಆರ್ಯಭಟ ಪ್ರಶಸ್ತಿ, ಕೆಂಪೇಗೌಡ ಕರ್ನಾಟಕ ಪ್ರಶಸ್ತಿ, ಶ್ರೀಲಂಕಾದ ರಾಷ್ಟ್ರೀಯ ಶಾಂತಿ ಪುರಸ್ಕಾರ ಪ್ರಶಸ್ತಿ, ನಾಟ್ಯ ಲಕ್ಷಣ ಅಕಾಡೆಮಿಯ ಪ್ರಶಸ್ತಿ ಪುರಸ್ಕೃತರಾಗಿರುವ ಇವರು ಭಾರತೀಯ ಸಾಂಸ್ಕೃತಿಕ ಕಲೆಯ ಪ್ರತೀಕವಾಗಿ ಜಾಗತಿಕವಾಗಿ ಗುರುತಿಸಲ್ಪಡುವ ಸಾಂಸ್ಕೃತಿಕ ರಾಯಭಾರಿಯಾಗಿದ್ದಾರೆ. ಭಾರತೀಯ ಕಲೆ ಮತ್ತು ಸಂಸ್ಕೃತಿಯ ಕುರಿತಾದ ಹಲವಾರು ನೃತ್ಯಕ್ಕೆ ಸಂಬಂಧಪಟ್ಟ ಡಾಕ್ಯುಮೆಂಟರಿಗಳಲ್ಲಿ ಇವರು ಕಾರ್ಯ ನಿರ್ವಹಿಸಿದ್ದು ನೃತ್ಯ ಪರಂಪರೆಯ ಗಟ್ಟಿ ಬುನಾದಿಗೆ ಕಾರಣವಾಗಿದ್ದಾರೆ.

ಈ ದಂಪತಿಗಳ ನೃತ್ಯ ಪರಂಪರೆಯನ್ನು ಅವರ ಮಗಳು ಜಾನವಿ ಅಲ್ಲದೆ ಗುರು ಹರಿಯವರ ಒಡಹುಟ್ಟಿದವರ ಮಕ್ಕಳಾದ ಶಿರೀಶ,ವರುಣಿ, ಶಿವಾನಿ, ದಿಯಾ ಮತ್ತು ಮಹೇಶ್ ಸೇರಿದಂತೆ ಕುಟುಂಬದ ಒಟ್ಟು ಎಂಟು ಜನ ಕಲಾವಿದರು ಮುಂದುವರಿಸಿಕೊಂಡು ಹೋಗುತ್ತಿದ್ದಾರೆ. ಜಶಸ್ವಿ,ನಿಧಿಕಾ ಮುಂತಾದ ವಿದ್ಯಾರ್ಥಿಗಳು ಕೂಡ ಗುರುಗಳು ತೋರಿದ ಹಾದಿಯಲ್ಲಿ ಸಾಗುತ್ತಿದ್ದಾರೆ.

"ನೂಪುರ್ ಪರ್ಫಾರ್ಮಿಂಗ್ ಆರ್ಟ್ಸ್ ಸೆಂಟರ್ ಟ್ರಸ್ಟ"ನ್ನು ನಡೆಸುತ್ತಿರುವ ಈ ದಂಪತಿಗಳು ಪ್ರತಿ ವರ್ಷವೂ ನೃತ್ಯ ಮಹೋತ್ಸವವನ್ನು ಕೇಂದ್ರ ಸರ್ಕಾರದ ಸಾಂಸ್ಕೃತಿಕ ಸಚಿವಾಲಯದ ಸಹಯೋಗದೊಂದಿಗೆ ನಡೆಸುತ್ತಿದ್ದು ಇತ್ತೀಚೆಗೆ ನಡೆದ

'ನೂಪುರ ನೃತ್ಯೋತ್ಸವ'ದ ದಿವ್ಯ ಸಾನಿಧ್ಯವನ್ನು ದಯಾನಂದ ಸರಸ್ವತಿ ಸ್ವಾಮೀಜಿ ಅವರು ವಹಿಸಿದ್ದು ಕರ್ನಾಟಕ ಸಂಗೀತ ಮತ್ತು ನೃತ್ಯ ಅಕಾಡೆಮಿಯ ಅಧ್ಯಕ್ಷರಾದ ಶ್ರೀಮತಿ ಶುಭ ಧನಂಜಯ್ ಮುಖ್ಯ ಅತಿಥಿಯಾಗಿ ಈ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು. ದೀಪವನ್ನು ಬೆಳಗಿ ಕಾರ್ಯಕ್ರಮವನ್ನು ಉದ್ಘಾಟಿಸಿದ ಭರತನಾಟ್ಯ ಕಲಾವಿದರಾದ ಕಲಾ ರತ್ನ ಸತ್ಯನಾರಾಯಣ ರಾಜು ಅವರು ನೂಪುರ್ ನೃತ್ಯೋತ್ಸವದಲ್ಲಿ ರಾಮಾಯಣದ ಹಲವಾರು ಪಾತ್ರಗಳನ್ನು ತಮ್ಮ ಅಭಿನಯ ನೃತ್ಯದ ಮೂಲಕ ಸುಮಾರು ಒಂದುವರೆ ಗಂಟೆಗಳ ಕಾಲ ಪ್ರಸ್ತುತ ಪಡಿಸಿ ಪ್ರೇಕ್ಷಕರನ್ನು ರಾಮಾಯಣ ಕಾಲಘಟ್ಟಕ್ಕೆ ಕರೆದೊಯ್ದು ರಸದೌತಣವನ್ನು ಪಡಿಸಿದರು.

ನಂತರ ಗುರು ಹರಿಯವರು ಮತ್ತು ಅವರ ಪತ್ನಿ ಚೇತನ ಮತ್ತು ತಂಡದ ವಿವಿಧ ಸದಸ್ಯರಿಂದ ಭಕ್ತಿ ನೃತ್ಯ ತರಂಗ ಎಂಬ ಒಂದು ಗಂಟೆಯ ಕಥಕ್ ನೃತ್ಯ ಕಾರ್ಯಕ್ರಮದಲ್ಲಿ ಶಿರಿಷಾ ಅವರಿಂದ ಸರಸ್ವತಿ ವಂದನ, ಪ್ರಸ್ತುತ ಅಮೆರಿಕದಲ್ಲಿ ವಾಸವಾಗಿ ನೃತ್ಯ ತರಗತಿಗಳನ್ನು ಹೇಳಿಕೊಡುತ್ತಿರುವ ಶಶಿಷ್ಮೆ ನಿಧಿಕ ನೊಂದಿಗೆ ಗುರು ಹರಿಯವರ ತಂದೆ ತಾಯಿಯ ಸ್ಮರಣಾರ್ಥವಾಗಿ ಲಿಂಗಾಷ್ಟಕಮ್ ಎಂಬ ನೃತ್ಯ ರೂಪಕವನ್ನು, ಸೂರ್ಯ ಅಷ್ಟಕ , ಹತ್ತು ಮಾತ್ರೆಗಳ ಜಪತಾಳ ಮತ್ತು ಅಂತಿಮವಾಗಿ ಕೃಷ್ಣನನ್ನು ಕುರಿತ ತಾಂಡವ ನೃತ್ಯ ಪ್ರದರ್ಶನಗಳು ಜರುಗಿದವು.

ಭರತನಾಟ್ಯ ಕಲಾವಿದರಾದ ಸತ್ಯನಾರಾಯಣ ರಾಜು ಮತ್ತು ಶುಭ ಧನಂಜಯ ಅವರಿಗೆ ಕಲಾ ರತ್ನ ಪ್ರಶಸ್ತಿಯನ್ನು ನೀಡಿ ಗೌರವಿಸಲಾಯಿತು ತಮ್ಮ ಜೀವಮಾನ ಸಾಧನೆಯ ಎಲ್ಲಾ ಹಣವನ್ನು ಕಥಕ್ ಗ್ರಾಮವನ್ನು ಕಟ್ಟಬೇಕೆಂಬ ಕನಸಿಗೆ ಐಎಂಎಫ್ ಎಂಬ ಹಣಕಾಸು ನಿರ್ವಹಣಾ ಸಂಸ್ಥೆಯಲ್ಲಿ ಈ ದಂಪತಿಗಳು ಹೂಡಿದ್ದರು. 2019ರಲ್ಲಿ ಐಎಂಎಫ್ ಮಾಲೀಕನಾದ ಮನ್ಸೂರ್ ಖಾನ್ ಎಲ್ಲ ಹಣವನ್ನು ಲಪಟಾಯಿಸಿ ಓಡಿ ಹೋದ ಪರಿಣಾಮವಾಗಿ ಸುಮಾರು 89 ಲಕ್ಷ ಹಣವನ್ನು ದಂಪತಿಗಳು ಕಳೆದುಕೊಂಡಿದ್ದು ಅವರ ಕಥಕ್ ಗ್ರಾಮದ ಕನಸು ಅಪೂರ್ಣಗೊಂಡಿದೆ. ಭರವಸೆಯನ್ನು ಕಳೆದುಕೊಳ್ಳದ ಈ ದಂಪತಿಗಳು ಸರಕಾರಿ ಮತ್ತು ಅರೆ ಸರಕಾರಿ ಸಂಸ್ಥೆಗಳ ಆರ್ಥಿಕ ಸಹಯೋಗದಲ್ಲಿ ಕಥಕ್ ಗ್ರಾಮವನ್ನು ಕಟ್ಟಬೇಕೆಂಬ ಮಹದಾಸೆಯನ್ನು ಹೊಂದಿದ್ದು ಅವರ ಆಸೆ ಈಡೇರಲಿ..... ಕರ್ನಾಟಕದ ಸಾಂಸ್ಕೃತಿಕ ಇತಿಹಾಸದಲ್ಲಿ 'ಕಥಕ್ ಗ್ರಾಮ' ಮತ್ತೊಂದು ಮೈಲಿಗಲ್ಲನ್ನು ಸೃಷ್ಟಿಸಲಿ ಎಂಬ ಆಶಯವನ್ನು ವ್ಯಕ್ತಪಡಿಸುತ್ತಾ, ಕಲೆಗಾಗಿ ತಮ್ಮ ಜೀವನವನ್ನೇ ಮುಡುಪಾಗಿಟ್ಟಿರುವ ಈ ದಂಪತಿಗಳ ಕಲಾಸೇವೆ ನಿರಂತರವಾಗಿ ಸಾಗಲಿ ಎಂದು ಹಾರೈಸುವ.

ಕವಿ ಮನಸು

## ಮೌನವೇ ಆಭರಣ

ಮಾತು ಕಡಿಮೆ ಕೆಲಸ ಹೆಚ್ಚು
ಇರಬೇಕು ಮನದಲಿ ಕಿಚ್ಚು
ಕೆಲಸ ಮಾಡುವ ಕೈಗೆ ಮೊಸರು
ಹರಟೆ ಮಲ್ಲರು ಜೀವಕೆ ಬೇಜಾರು।


ಋಷಿ ಮುನಿಗಳು ಇರುತ್ತಿದ್ದರು ಮೌನ
ಜನರ ಮನದಲಿ ಮೂಡುತ್ತಿತ್ತು ಧ್ಯಾನ
ಮೌನದಿಂದಲೇ ವರ್ಚಸ್ಸು ಜಾಸ್ತಿ
ಋಷಿಮುನಿಗಳಿಗೆ ಮೌನವೇ ಆಸ್ತಿ।

ಮನೆಯಲಿ ಯಜಮಾನನ ಮಾತು ಕಡಿಮೆ
ಮನೆಯಲ್ಲಿ ಎಲ್ಲರೂ ತೋರುತ್ತಿದ್ದರು ಗರಿಮೆ
ಮಾತು ಕಡಿಮೆ ಮನೆಯಲಿ ಶಾಂತಿ
ಸಮಾಧಾನ
ಮೌನದಲಿ ಬರುವುದು ಮನದಲಿ ವ್ಯವಧಾನ।

ಮೌನವೇ ಆಭರಣ ಜನಪ್ರಿಯ ಗಾದೆ
ಮಾತು
ಮೌನಕ್ಕೆ ಕೊಡಬೇಕು ನಿತ್ಯ ಬಾಳಲಿ ಒತ್ತು
ಮೌನಕ್ಕೆ ಸಮಾಜದಲ್ಲಿ ಜಾಸ್ತಿ ಬರುತ್ತೆ
ಕಿಮ್ಮತ್ತು
ಮೌನಕ್ಕೆ ಬರದು ಬದುಕಿನ ದಾರಿಯಲ್ಲಿ
ಆಪತ್ತು।

– ಚಂದ್ರಶೇಖರಯ್ಯ ರೋಣದಮಠ.

## ಒಂದು ಮಾತ್ರ ಉಳಿದಿದೆ!.



ಇಂದು ನನ್ನದು ಬೊಚ್ಚು ಬಾಯಿಯೆ
ಸಂದ ವಯಸಿನ ಗುಣಗಳು
ಹಿಂದೆ ಮುತ್ತಿನ ಮಣಿಯ ತರದಲಿ
ಚೆಂದ ಕಾಣುತಲಿದ್ದವು

ಹೊಳೆವ ದಂತದಲೊಂದು ಉಳಿದಿದೆ
ಕಳಚಿ ಬಿದ್ದಿವೆ ಉಳಿದವು
ಹಳೆಯ ನೆನಪಿನ ಸುರುಳಿ ಬಿಚ್ಚಿದೆ
ಕಳೆದ ಸಂತಸ ದಿನಗಳು

ಬಲೆಯ ಬೀಸಿದೆ ಕಾಲವೀತರ
ಸುಳಿಗೆ ಸಿಲುಕಿದೆ ಬದುಕಿದು
ಚೆಲುವ ಮರೆಸಿದ ಸುಕ್ಕು ಹೋಗದು
ಹೊಳೆಯ ನೀರಲಿ ತೊಳದರೂ

ಗೆರೆಯು ಮುಖದಲಿ ಅಂದ ಕೆಡಿಸಿದೆ
ಗುರುತು ಕಾಣದು ಬಾಲ್ಯದ
ಕರೆಯು ಬಂದಿದೆ ಕಾಡು ಸೇರಲು
ಮರೆಯೆ ಸ್ನೇಹದ ಬಂಧವ॥

ಪೆರ್ಮುಖ ಸುಬ್ರಹ್ಮಣ್ಯ ಭಟ್
(ಚಿತ್ರ ಕೃಪೆ ಅಂತರ್ಜಾಲ)

COLD PRESSED OILS
HEALTH Benefits
- Heart Healthy
- Diabetes Friendly
- Healthy Skin & More
- Hair Fall Control
Nandi Enterprises
C/o HAMPI TIMES
Valmiki Circle, HOSAPETE
9482599089

# ಒಂದೊಳ್ಳೆ ಮಾತು....

ಒಂದೊಳ್ಳೆ ಮಾತು ಏನಲ್ಲ ಬದಲಾವಣೆಗೆ ಕಾರಣವಾಗುತ್ತದೆ ಎನ್ನುವುದನ್ನು ನಾವು ಅನೇಕ ಬಾರಿ ಸಣ್ಣ ಸಣ್ಣ ಘಟನೆಗಳ ಮೂಲಕ ಆಗಾಗ ಉದಾಹರಿಸುತ್ತ ಬಂದಿರುವುದನ್ನು ಅಲ್ಲಲ್ಲೆ ಕಾಣುತ್ತೇವೆ.

ಒಂದು ದಿನ ಮಗು ಥಾಮಸ್ ಆಲ್ವಾ ಎಡಿಸನ್ ಮನೆಗೆ ಬಂದು ತನ್ನ ತಾಯಿಯ ಕೈಗೆ ಒಂದು ಪತ್ರ ನೀಡಿ, 'ಅಮ್ಮಾ, ನಮ್ಮ ಟೀಚರ್ ಈ ಪತ್ರವನ್ನು ನಿನಗೆ ಮಾತ್ರ ಕೊಡಲು ಹೇಳಿದ್ದಾರೆ' ಎಂದನಂತೆ, ಅದನ್ನು ನೋಡಿದ ತಾಯಿ ಮಗನಿಗಾಗಿ ಆ ಪತ್ರವನ್ನು ಗಟ್ಟಿಯಾಗಿ ಓದಿದಳು, ಅವಳ ಕಣ್ಣು ಕಣ್ಣು ಒದ್ದೆಯಾಯಿತು ಆ ಪತ್ರದಲ್ಲಿ "ನಿಮ್ಮ ಮಗ ತುಂಬಾ ಬುದ್ಧಿವಂತನಿದ್ದಾನೆ, ನಮ್ಮ ಶಾಲೆಯಲ್ಲಿ ಅವನ ಬುದ್ಧಿವಂತಿಕೆಗೆ ತಕ್ಕುದಾದ ಯಾವ ವ್ಯವಸ್ಥೆಯೂ ಇಲ್ಲ, ಹಾಗೂ ಅವನಿಗೆ ಕಲಿಸಬಲ್ಲ ಅರ್ಹತೆ ನಮ್ಮ ಯಾವ ಉಪಾಧ್ಯಾಯರಿಗೂ ಇಲ್ಲ. ಆದುದರಿಂದ ಅವನ ವಿದ್ಯಾಭ್ಯಾಸವನ್ನು ನೀವೇ ನಿಮ್ಮ ಮನೆಯಲ್ಲಿ ನಡೆಸುವುದು ಒಳಿತು" ಎಂದು ಬರೆಯಲಾಗಿತ್ತು.

ಮುಂದುವರಿದು ಆ ತಾಯಿ ತನ್ನ ಮಗನ ವಿದ್ಯಾಭ್ಯಾಸಕ್ಕೆ ತನ್ನ ಮನೆಯಲ್ಲಿಯೇ ವ್ಯವಸ್ಥೆ ಮಾಡುತ್ತಾಳಂತೆ.



ಜಿ ಶಿವಕುಮಾರ್ ಸೋಗಿ
ಲೇಖಕರು, ಕಾರವಾರ ಕೈಗಾ

Scan For Digital Colourful
HAMPI TIMES E-paper

ಮುಂದುವರಿದು ತುಂಬಾ ವರ್ಷಗಳ ನಂತರ ಎಡಿಸನನ ತಾಯಿ ಮರಣಹೊಂದುತ್ತಾರೆಂತೆ. ಆಗ ಎಡಿಸನ್ ಆಗಲೆ ಪ್ರಪಂಚದ ಅಗ್ರಮಾನ್ಯ ವಿಜ್ಞಾನಿಗಳಲ್ಲಿ ಒಬ್ಬರಾಗಿರುತ್ತಾರೆ. ಒಂದು ದಿನ ಅಕಾಸ್ಮಾತ್ ಆಗಿ ತನ್ನ ತಾಯಿಯ ಪೆಟ್ಟಿಗೆಯಲ್ಲಿನ ಹಳೆಯ ವಸ್ತುಗಳನ್ನು ಪರಿಶೀಲಿಸುತ್ತಿದ್ದಾಗ ಮಡಚಿದ ಕಾಗದವೊಂದು ಕಣ್ಣಿಗೆ ಬಿತ್ತು. ಅದನ್ನು ಬಿಡಿಸಿ ನೋಡಿದರೆ ಅವರಿಗೆ ಆಶ್ಚರ್ಯವೊಂದು ಕಾದಿತ್ತು. ಅದರಲ್ಲಿ ಹೀಗೆ ಬರೆದಿತ್ತು " ನೋಡು ತಾಯಿ ನಿನ್ನ ಮಗ ಒಬ್ಬ ಬುದ್ಧಿಮಾಂದ್ಯ, ಅವನನ್ನು ನಾವು ಇನ್ನು ಮುಂದೆ ನಮ್ಮ ಶಾಲೆಗೆ ಸೇರಿಸಿಕೊಳ್ಳುವುದಿಲ್ಲ, ಅವನ ಅಭ್ಯಾಸಕ್ಕಾಗಿ ನೀವು ಬೇರೆಯ



ವ್ಯವಸ್ಥೆ ಮಾಡಿಕೊಳ್ಳುವುದು, ಎಂದು ಬರೆಯಲಾಗಿತಂತೆ!

ಎಡಿಸನ್‌ನ ತಾಯಿ ತನ್ನ ಮಗುವಿನ ಮೃದು ಮನಸ್ಸಗೆ ತೊಂದರೆಯಾಗಬಾರದು ಎಂದು ಅವನ ಮನಸ್ಸಿಗೆ ಉಂಟಾಗಬಹುದಾದ ಘಾಸಿಯನ್ನು ಮೊದಲೇ ಊಹಿಸಿ ಅಂದು ಅವಳು ಆ ಪತ್ರದಲ್ಲಿನ ವಿಷಯದ ವಿರುದ್ಧವಾಗಿ ಓದಿದ್ದಳು ಎನ್ನುವುದು ಗೊತ್ತಾಗುತಿದ್ದಂತೆ ಎಡಿಸನ್ ತನ್ನ ತಾಯಿಯನ್ನು ನೆನೆದು ಗದ್ಗದಿತನಾಗಿ ಗಂಟೆಗಟ್ಟಲೆ ಬಿಕ್ಕಿಬಿಕ್ಕಿ ಅತ್ತನಂತೆ. ಇದನ್ನು ಅವನು ತನ್ನ ದಿನಚರಿಯಲ್ಲಿ "ಥಾಮಸ್ ಆಲ್ವಾ ಎಡಿಸನ್ ಒಬ್ಬ ಬುದ್ಧಿಮಾಂದ್ಯ ಮಗು, ಆದರೆ ಅವನ ತನ್ನ ಶ್ರೇಷ್ಠ ಮಾತೆಯ ದೆಸೆಯಿಂದ ಅವನು ಶತಮಾನದ ಬುದ್ಧಿವಂತನಾಗುತ್ತಾನೆ" ? ಎಂದು ಬರೆಯುತ್ತಾನೆ.

ಹೀಗೆ ತಾಯಿಯೇ ಮೊದಲ ಗುರು, ಮನೆಯೇ ಮೊದಲ ಪಾಠಶಾಲೆ' ಎಂಬ ಮಾತಿನಂತೆ ಮಗುವಿನ ಬೆಳವಣಿಗೆಯಲ್ಲಿ ತಾಯಿಯ ಪಾತ್ರ ಬಹಳ ಪ್ರಾಮುಖ್ಯವಾಗಿರುತ್ತದೆ. ಹಾಗಾಗಿ ಪ್ರತಿಯೊಬ್ಬ ತಾಯಂದಿರೂ ತಮ್ಮ ಮಕ್ಕಳನ್ನು ಪ್ರೀತಿ, ವಿಶ್ವಾಸ, ಕರುಣೆ ಮತ್ತು ಕಾಳಜಿಯಿಂದ ಬೆಳಸಬೇಕು ಆಗ ಮಾತ್ರ ಜಗತ್ತನ್ನು ಬೆಳಗಬಲ್ಲ ಮಕ್ಕಳು ಕಾಣಸಿಗುತ್ತಾರೆ.

ಹಾಗೆಯೆ ಚಿಕ್ಕಂದಿನಲ್ಲೆ ಮಕ್ಕಳಿಗೆ ಸರಿ ತಪ್ಪುಗಳ ಕಲ್ಪನೆಯನ್ನು ತಾಯಿಯಾದವಳು ನೀಡಬೇಕು, ಏಕೆಂದರೆ ಮಗುವನ್ನು ಬಾಲ್ಯದಲ್ಲಿ ಪ್ರೀತಿಯಿಂದ ಬೆಳೆಸಬೇಕು ಎನ್ನುವುದು ಎಷ್ಟು ಸರಿಯೋ ಅಷ್ಟೇ ಅವರು ತಪ್ಪು ಮಾಡಿದಾಗ ಖಂಡಿಸಬೇಕು ಕೂಡ, ಮಮತೆಯ ಜೊತೆಗೆ ಮೋಹದ ಮೇಲಿನ ಹಿಡಿತ ತಪ್ಪದಂತೆ ನೋಡಿಕೊಳ್ಳಬೇಕು. ಮಗು ತಪ್ಪು ಮಾಡಿದಾಗಲೂ ಪ್ರೀತಿ ಮಾಡಬೇಕೆಂದು ಇಲ್ಲವಲ್ಲ. ಉದಾಹರಣೆಗೆ ಸಂಸ್ಕೃತದ ಈ ಸುಭಾಷಿತವನ್ನೊಮ್ಮೆ ನೋಡಿದರೆ,

**ಲಾಲನಾತ್ ಬಹವೋ ದೋಷಾಃ
ತರ್ಜನಾದ್ ಬಹವೋ ಗುಣಾಃ ।
ತಸ್ಮಾತ್ ಪುತ್ರಂ ಚ ಶಿಷ್ಯಂ ಚ
ತರ್ಜಯೇತ್ ನ ತು ಲಾಲಯೇತ್ ॥**

ಅಂದರೆ ಯಾರು ತಮ್ಮ ಮಕ್ಕಳನ್ನು ಮತ್ತು ಶಿಷ್ಯರನ್ನು ಅತಿಯಾಗಿ ಮುದ್ದು ಮಾಡುವುದರಿಂದ ಅನೇಕ ದೋಷಗಳೂ, ಅವಶ್ಯವಿದ್ದಲ್ಲಿ ಅವರನ್ನು ಗದರಿಸುವುದರಿಂದ ಅವರಲ್ಲಿ ಅನೇಕ ಗುಣಗಳೂ ಉಂಟಾಗುತ್ತವೆ. ಹಾಗಾಗಿ ಮಕ್ಕಳು ಮತ್ತು ಶಿಷ್ಯರನ್ನು ಅಗತ್ಯ ಬಿದ್ದಾಗ ಪ್ರೀತಿಸಬೇಕು ಅನಿವಾರ್ಯವಾದಾಗ ಶಿಸ್ತಿನಿಂದ ನಿಯಂತ್ರಿಸುತ್ತಿರಬೇಕು.

ಒಂದು ವೇಳೆ ತಪ್ಪು ನಮ್ಮ ಮಕ್ಕಳು ತಪ್ಪು ಮಾಡಿದಾಗಲೂ ಅವರನ್ನು ಖಂಡಿಸದೇ ಮುದ್ದಿಸುತ್ತಿದ್ದರೆ ಮುಂದೆ ಆ ಮಗು ತಾನು ಮಾಡುತ್ತಿರುವುದೇ ಸರಿ ಎಂದುಕೊಂಡು ಸಮಾಜಘಾತುಕ ಚಟುವಟಿಕೆಯಲ್ಲಿ ತೊಡಗಿಕೊಳ್ಳ ಬಹುದಲ್ಲವೆ. ಹಾಗಾಗಿ ನಮ್ಮ ಮಕ್ಕಳನ್ನು ಅಗತ್ಯವಿದ್ದಾಗ ಪ್ರೀತಿಸುವುದು, ಅನಿವಾರ್ಯವಾದಾಗ ನಿಯಂತ್ರಿಸುವುದು ಅನಿವಾರ್ಯ. ಎಲ್ಲರೂ ತಿಳಿದಿರಲೇಬೇಕಾದ ವಿಷಯವೆಂದರೆ ಶಿಕ್ಷೆಯೂ ಒಂದು ಶಿಕ್ಷಣದ ಒಂದು ಭಾಗ ಆದರೆ ಆ ಶಿಕ್ಷೆ ಮಕ್ಕಳನ್ನು ಭಯಪಡಿಸಬಾರದು, ತನ್ನ ತಪ್ಪನ್ನು ತಿದ್ದಿಕೊಳ್ಳಲು ಸಹಕಾರಿಯಾಗಬೇಕು.

ಹೀಗೆ ಅನೇಕ ಸಣ್ಣಪುಟ್ಟ ಕಥೆ, ಕವನಗಳು, ನಿದರ್ಶನಗಳು, ನಾಟಕಗಳು, ಹಬ್ಬ ಹರಿದಿನಗಳ ಮುಖಾಂತರ ಸಮಾಜದ ಪ್ರತಿಯೊಬ್ಬರೂ ಮಾತೃ ಹೃದಯವನ್ನು ಹೊದ್ದು ಒಬ್ಬ ಜೀಜಾಬಾಯಿಯಂತೆ, ಒಬ್ಬ ಕುಂತಿಯಂತೆ, ನಮ್ಮ ನಿಮ್ಮನ್ನೆಲ್ಲ ಹೆತ್ತು ಹೊತ್ತು ಸಾಕಿ ಸಲುಹಿದ ನಮ್ಮ ನಮ್ಮ ಮನೆಯಲ್ಲಿನ ನಮ್ಮಗಳೆಲ್ಲರ ತಾಯಿಯಂತೆ ನಮ್ಮ ಮುಂದಿನ ಪೀಳಿಗೆಯನ್ನು ಸಮರ್ಥವಾಗಿ ಮುನ್ನೆಡೆಸಬೇಕು. ಯಾರಿಗೆ ಗೊತ್ತು ಒಂದೊಳ್ಳೆ ಮಾತು ಯಾರ ಯಾರ ಹೃದಯವನ್ನು ಬದಲಿಸಬಹುದು ಏನೊ...

# ಅನ್ನ ಪರಬ್ರಹ್ಮಂ..

## ಜಗತ್ತಿನಾದ್ಯಂತ ಪ್ರತಿ ವರ್ಷ 100 ಕೋಟಿ ಟನ್‌ಗಿಂತ ಹೆಚ್ಚು ಆಹಾರ ಪೋಲಾಗುತ್ತಿದೆ..!

## ಆಹಾರ ವ್ಯರ್ಥವಾಗದಿರಲು ಕೈಗೊಳ್ಳಬೇಕಾದ ಕ್ರಮಗಳು | ನಮ್ಮ ಹೊಟ್ಟೆಗೆ ಆಹಾರ ಅವಶ್ಯ

■ ರಾಜಶೇಖರ, ಹೊಸಪೇಟೆ
shekarraaj7@gmail.com

ಆಹಾರ ಪ್ರತಿ ಜೀವಿಯ ಪ್ರಾಥಮಿಕ ಅವಶ್ಯಕತೆ. ಆಹಾರವಿಲ್ಲದೆ ಬದುಕುವುದು ದುಸ್ತರ. ಪ್ರತಿ ಜೀವಿಯು ಹಪಹಪಿಸುವುದು ಆಹಾರಕ್ಕಾಗಿ. ಎಲ್ಲರೂ ಮಾಡುವುದು ಹೊಟ್ಟೆಗಾಗಿ, ಗೇಣು ಬಟ್ಟೆಗಾಗಿ ಎನ್ನುವ ನಾಣ್ಣುಡಿಯಂತೆ.

ಗೇಣು ಬಟ್ಟೆಯಿಲ್ಲದಿದ್ದರೂ ಹೊಟ್ಟೆಯ ಹಸಿವು ನೀಗಲೇಬೇಕು. ಪ್ರಾಣಿ, ಪಶು, ಪಕ್ಷಿಗಳ ಜೀವನ ಆಹಾರಕ್ಕಾಗಿ ನಿರಂತರ ಓಡಾಟ, ಹಾರಾಟ ಎನ್ನುವಂತೆ ಇರುತ್ತದೆ.

ಇನ್ನು ಮನುಷ್ಯರಲ್ಲಿ ಅದೆಷ್ಟೋ ನಿರ್ಗತಿಕರು ತುತ್ತು ಅನ್ನಕ್ಕಾಗಿ ಅಲೆದಾಟ ಮಾಡುತ್ತಾರೆ. ಹಸಿದವನಿಗೆ ಮಾತ್ರ ಗೊತ್ತು ಅಗುಳಿನ ಮಹತ್ವ ಎಂಬಂತೆ. ಒಂದು ಅಂದಾಜಿನ ಪ್ರಕಾರ ಪ್ರತಿನಿತ್ಯ ಜಗತ್ತಿನಲ್ಲಿ ಸುಮಾರು 80 ಕೋಟಿ ಜನರು ಹಸಿವಿನಿಂದ ಮಲಗುತ್ತಿದ್ದಾರೆ. ಆದರೆ ವಿಪರ್ಯಾಸವೆಂದರೆ ಜಗತ್ತಿನಾದ್ಯಂತ ಪ್ರತಿ ವರ್ಷ 100 ಕೋಟಿ ಟನ್‌ಗಿಂತ ಹೆಚ್ಚು ಆಹಾರ ಪೋಲಾಗುತ್ತಿದೆ..! ಇದು ಶೋಚನಿಯ ವಿಚಾರ.

ಆಹಾರ ವ್ಯರ್ಥ ಮಾಡುತ್ತಿರುವುದು ಕೇವಲ ಶ್ರೀಮಂತ ಅಥವಾ ದೊಡ್ಡ ದೇಶಗಳು ಮಾತ್ರವಲ್ಲ. ಹಸಿವಿನಿಂದ ನಲುಗುತ್ತಿರುವ ಸಣ್ಣ ಮತ್ತು ಬಡ ದೇಶಗಳಿಂದಲೂ ಆಹಾರ ತ್ಯಾಜ್ಯ ಹೊರಬೀಳುತ್ತಿದೆ ಎಂಬ ವರದಿ ಇದೆ.

ಭಾರತದ ವಿಚಾರಕ್ಕೆ ಬಂದರೆ, ವಿಶ್ವಸಂಸ್ಥೆಯ ವರದಿ ಪ್ರಕಾರ ಪ್ರತಿ ವರ್ಷ ಭಾರತೀಯರು ಸರಾಸರಿ 53 ಕೆಜಿ ಆಹಾರವನ್ನು ವ್ಯರ್ಥ ಮಾಡುತ್ತಿದ್ದಾರೆ.


ವೇಗವಾಗಿ ಅಭಿವೃದ್ಧಿ ಹೊಂದುತ್ತಿರುವ ಮತ್ತು ಆರ್ಥಿಕವಾಗಿ ಮಹಾಶಕ್ತಿಯಾಗು ವತ್ತ ಸಾಗುತ್ತಿರುವ ಭಾರತಕ್ಕೆ ಇಂದಿಗೂ ಬಹುದೊಡ್ಡ ಸವಾಲು ಎಂದರೆ ಅದು ಹಸಿವಿನ ಸಮಸ್ಯೆ.

ಒಂದೆಡೆ ಕೋಟ್ಯಧಿಪತಿಗಳ ಸಂಖ್ಯೆ ಹೆಚ್ಚುತ್ತಿರುವ ಭಾರತ ದೇಶದಲ್ಲಿ, ಇನ್ನೊಂದೆಡೆ ಕೋಟಿಗಟ್ಟಲೆ ಜನರು ಖಾಲಿ ಹೊಟ್ಟೆಯಲ್ಲಿ ಮಲಗುತ್ತಿರುವುದು ದುರಂತದ ವಿಷಯ.

ವಿಶ್ವಸಂಸ್ಥೆ ವರದಿ ಪ್ರಕಾರ,

1) 2022 ರ ಒಂದೇ ವರ್ಷದಲ್ಲಿ ಜಗತ್ತಿನಲ್ಲಿ ಒಂದು ಶತಕೋಟಿ ಆಹಾರ ವ್ಯರ್ಥವಾಗಿದೆ. ಇದು ಜನರಿಗೆ ಸಿಗುವ ಆಹಾರದಲ್ಲಿ ಶೇ 19 ರಷ್ಟು ಪೋಲಾದಂತೆ.

2) ಜಗತ್ತಿನಲ್ಲಿ ಹೆಚ್ಚಿನ ಆಹಾರ ವ್ಯರ್ಥವು ಹೋಟೆಲ್‌ಗಳಿಗಿಂತ ಕೌಟುಂಬಿಕವಾಗಿ ನಡೆಯುತ್ತದೆ. ಒಟ್ಟು ಆಹಾರ ತ್ಯಾಜ್ಯದಲ್ಲಿ ಶೇ 60 ಕೌಟುಂಬಿಕ ಪಾತ್ರವಿದೆ.



ಜಗತ್ತಿನಾದ್ಯಂತ ಮೂರನೇ ಒಂದು ಭಾಗದಷ್ಟು ಮಾನವರು ಆಹಾರದ ಬಿಕ್ಕಟ್ಟನ್ನು ಎದುರಿಸುತ್ತಿದ್ದಾರೆ ಎಂಬ ಅಂಕಿ ಅಂಶ ನಿಜಕ್ಕೂ ಮನಕಲುಕುವಂತದ್ದು.

ಆಹಾರ ದೇವರಿಗೆ ಸಮಾನ. ತುತ್ತು ಅನ್ನವೇ ದೇವರು.. ಎಲ್ಲ ಜೀವರಾಶಿಗಳು ಜೀವಂತವಾಗಿರುವುದು ಕೇವಲ ಆಹಾರದಿಂದ. ಅದನ್ನು ಪೋಲಾಗದಂತೆ ನೋಡಿಕೊಳ್ಳುವುದು ಪ್ರತಿಯೊಬ್ಬರ ಜವಾಬ್ದಾರಿ. ಮನೆಗಳು, ಹೋಟೆಲ್‌ಗಳು ಮತ್ತು ಆಹಾರ ಸೇವಾ ಕೇಂದ್ರಗಳಲ್ಲಿ ಮಾತ್ರ ಆಹಾರ ಪೋಲಾಗುತ್ತದೆ ಎಂದೇನಿಲ್ಲ. ಆಹಾರ ಧಾನ್ಯಗಳು ಕೂಡ ವ್ಯರ್ಥವಾಗುತ್ತವೆ. ಹೊಲಗಳಿಂದ, ಮನೆಗಳಿಗೆ ಮತ್ತು ಗೊಧಾಮುಗಳಿಗೆ ಆಹಾರ ಧಾನ್ಯಗಳನ್ನು ಸಾಗಿಸುವಾಗಲು ಹೆಚ್ಚಿನ ಪ್ರಮಾಣದಲ್ಲಿ ಸೋರಿಕೆಯಾಗುತ್ತವೆ. 2022 ರಲ್ಲಿ ಜಗತ್ತಿನದ್ಯಾತ 23 ಕೋಟಿಗೂ ಅಧಿಕ ಧಾನ್ಯ ಹೀಗೆಯೇ ಪೋಲಾಗಿದೆ.

**ಆಹಾರ ವ್ಯರ್ಥವಾಗದಿರಲು ಕೈಗೊಳ್ಳಬೇಕಾದ ಕ್ರಮಗಳು.**

1) ಶಾಲೆಗಳಲ್ಲಿ ಆಹಾರ ತ್ಯಾಜ್ಯಗಳ ಕುರಿತು ಅರಿವು ಮೂಡಿಸುವ ಪಠ್ಯಗಳು ಅವಶ್ಯ. ಒಂದೊಂದು ಧಾನ್ಯ ಅಥವಾ ಆಗುಳಿನ ಮಹತ್ವ ಬಾಲ್ಯದಿಂದಲೇ ಮಕ್ಕಳಿಗೆ ಮನವರಿಕೆ ಮಾಡಬೇಕು.

2) ಮದುವೆ, ಹಬ್ಬಗಳ ಸಡಗರದಲ್ಲಿ ಊಟದ ಸಂಭ್ರಮವೇ ಮುಖ್ಯವಾಗಿರುತ್ತದೆ. ಹತ್ತಾರು, ಖಾದ್ಯಗಳು.! ಒಬ್ಬ ಮನುಷ್ಯ ಎಷ್ಟು ಸೇವಿಸಲು ಸಾಧ್ಯ ಎನ್ನುವುದು ಗಮನಿಸಬೇಕು.

3) ಹೋಟೆಲ್ಗಳಲ್ಲಿ ಪ್ರತಿನಿತ್ಯ ಸಾಕಷ್ಟು ಆಹಾರ ಉಳಿದುಬಿಡುತ್ತದೆ. ಆ ಆಹಾರವನ್ನು ಸಂಗ್ರಹಿಸಿ ಹಸಿದ ಜೀವಗಳಿಗೆ ತಲುಪಿಸುವ ಕಾರ್ಯ ನಡೆಯಬೇಕು. ಈ ನಿಟ್ಟಿನಲ್ಲಿ ಸಾಕಷ್ಟು ಸೇವಾ ಸಂಸ್ಥೆಗಳು ಈ ಮಹಾತ್ಕಾರ್ಯವನ್ನು ಮಾಡುತ್ತಿವೆ. ನಿಜಕ್ಕೂ ಅವರ ಸೇವೆ ತುಂಬಾ ಪ್ರಶಂಸನೀಯ.

4) ಆಹಾರದ ಜೊತೆಗೆ ಭಾವನಾತ್ಮಕ ಸಂಬಂಧ ಬೆಳೆಯಬೇಕು. ಆಹಾರದ ಬಗ್ಗೆ ಗೌರವ, ಭಕ್ತಿಯ ಭಾವನೆ ಬೇರೂರಬೇಕು. ಅನ್ನ ಪರಬ್ರಹ್ಮ ಎಂದು ಇದಕ್ಕಾಗಿಯೇ ಹೇಳಿರುವುದು.

ಇತ್ತೀಚಿನ ಕಾಲಮಾನದಲ್ಲಿ ಮನೆಯಲ್ಲಿ ಟಿವಿ, ಇಲ್ಲವೇ ಮೊಬೈಲ್ ನೋಡುತ್ತಾ ತಿಂಡಿ, ಊಟ ಸವೆಯುವ ಹವ್ಯಾಸ ತುಂಬಾ ಹೆಚ್ಚಾಗಿದೆ. ಇದರಲ್ಲಿ ಮಕ್ಕಳ ಜೊತೆ ಹಿರಿಯರಿಗೂ ಈ ಅಭ್ಯಾಸ ಇದೆ. ಇದರಿಂದ ನಾವು ಸವೆಯುವ ಆಹಾರದ ಕಡೆ ಗಮನ ಕಡಿಮೆಯಾಗುತ್ತಿದೆ. ಇದು ನಾವು ಆಹಾರಕ್ಕೆ ತೋರುವ ಅಗೌರವ. ಆಹಾರ ಸೇವನೆಯನ್ನು ಶ್ರದ್ದೆಯಿಂದ ಕೃತಜ್ಞತೆ ಯಿಂದ ಸೇವಿಸೋಣ. ಆಗ ಆಹಾರ ವ್ಯರ್ಥ ಸ್ವಲ್ಪವಾದರೂ ಕಡಿಮೆಯಾದಿತು. ಮನೆಯಲ್ಲಿ ರಾತ್ರಿ ಊಟದ ನಂತರ ಆಹಾರ ಉಳಿದರೆ ನಮ್ಮ ನಮ್ಮ ಮನೆಯ ಹತ್ತಿರ ಇರುವ ನಾಯಿಗಳಿಗೆ ಹಾಕಿ. ಅವು ನಮ್ಮ ಬಗ್ಗೆ ಕೃತಜ್ಞರಾಗುತ್ತವೆ. ಈ ಜಗತ್ತಿನಲ್ಲಿ ಆಹಾರಕ್ಕಿರುವ ಮಹತ್ವ ಬೇರೆ ಯಾವುದೇ ವಸ್ತುವಿಗೆ ಇರಲಿಕ್ಕೆ ಸಾಧ್ಯವಿಲ್ಲ.. ಹಾಗಾಗಿ ಎಂದಿಗೂ ಆಹಾರ ಪೋಲಾಗದಂತೆ ನೋಡಿಕೊಳ್ಳುವ ಜವಾಬ್ದಾರಿ ನಮ್ಮೆಲ್ಲರದು ಆಗಲಿ. ಆಹಾರವನ್ನು ಪೋಲು ಮಾಡುವುದು ಭೂಮಿಯ ಮೇಲಿನ ಅತಿ ದೊಡ್ಡ ಅಪಚಾರ.

ನಾವು ಎಷ್ಟೇ ಸಂಪಾದಿಸಿದರೂ, ಏನೇ ಅಸ್ತಿ ಪಾಸ್ತಿ ಮಾಡಿದರೂ, ಕೊನೆಗೆ ಜೀವಂತವಾಗಿರಲು ನಮ್ಮ ಹೊಟ್ಟೆಗೆ ಆಹಾರ ಬೇಕು. ಕೊನೆಯದಾಗಿ ಮನೆಯಲ್ಲಾಗಲಿ, ಹೋಟೆಲ್ಗಳಲ್ಲಾಗಲಿ ಅಥವಾ ಯಾವುದೇ ಸಮಾರಂಭಗಳಲ್ಲಾಗಲಿ ಇದನ್ನು ನಿಷ್ಠೆಯಿಂದ ಪಾಲಿಸೋಣ.

Take what you eat. &
Eat whatever you take.

"ನಾವು ತಿನ್ನುವಷ್ಟೇ ತಟ್ಟೆಗೆ ಹಾಕಿಸಿಕೊಳ್ಳೋಣ. ತಟ್ಟೆಯಲ್ಲಿ ಇರುವುದನ್ನೆಲ್ಲ ಉಳಿಸದೇ ತಿನ್ನೋಣ." ಇದನ್ನು ಪ್ರತಿಯೊಬ್ಬರೂ ಪಾಲಿಸಿದರೆ ಸಾಕಷ್ಟು ಪ್ರಮಾಣದಲ್ಲಿ ಆಹಾರ ಪೋಲಾಗುವುದನ್ನು ಕಡಿಮೆಗೊಳಿಸಬಹುದು.

# ಸಮಯದ ಕೈ ಗೊಂಬೆ

■ ಚೇತನ ಭಾರ್ಗವ, ಬೆಂಗಳೂರು

ನಾವೆಲ್ಲಾ ಸಮಯದ ಗೊಂಬೆಗಳಾಗಿದ್ದೇವೆ. ಸಮಯವು ಸರಿಯಿದ್ದಾಗ ಪರಿಸ್ಥಿತಿಗಳು ನಮಗೆ ಅನುಕೂಲಕರ ವಾಗಿರುತ್ತವೆ. ಸಮಯವು ನಮ್ಮ ಪರವಾಗಿಲ್ಲದಿದ್ದಲ್ಲಿ ಹಗ್ಗವು ಹಾವಾಗಿ ಕಾಣಿಸುತ್ತದೆ.

ನಮ್ಮೆಲ್ಲರ ಸೀಮಿತ ಬದುಕಿನಲ್ಲಿ ಸಮಯವೇ ಸೂತ್ರಧಾರಿ. ಸಮಯವು ಯಾರಿಗೂ ಕಾಯುವುದಿಲ್ಲ. ಸರಿದು ಹೋಗುತ್ತಲೇ ಇರುತ್ತದೆ. ಜಾರುತ್ತಿರುವ ಸಮಯದ ಅನುಗುಣವಾಗಿಯೇ ಭುವಿಯ ಮೇಲ್ಮೈ ಲಕ್ಷಣಗಳೂ ಬದಲಾಗುತ್ತಾ ಇರುತ್ತದೆ. ಋತುಗಳು ಬದಲಾಗುತ್ತದೆ. ಪ್ರಕೃತಿಯಲ್ಲಿ ಪ್ರತಿಯೊಂದು ವಸ್ತುವೂ ಜೀವವಿರಲಿ ಜಡವಿರಲಿ ಕಾಲನ ಹೊಡೆತಕ್ಕೆ ಬಲಿಯಾಗುವುದು ದಿಟ. ಎಂತಹ ಕಡಿದಾದ ಬೆಟ್ಟವಿರಲಿ ಸಮಯ ಕಳೆದಂತೆ ಜಡಿ ಮಳೆಗೆ ಕುಸಿದು ಬೀಳಬಹುದು. ಹುಟ್ಟಿದ ಪ್ರತಿಯೊಂದು ಜೀವಿಯೂ ಕೊನೆಗೆ ಮುದಿಯಾಗಿ ಮಣ್ಣಾಗುತ್ತದೆ. ಮೇರುಗಿರಿಯಂತೆ ಮೆರೆದ ಸಾಮ್ರಾಜ್ಯಗಳು ಕೋಟೆ ಕೊತ್ತಳಗಳು, ವೈಭವೋಪೇತ ಅರಮನೆಗಳು ಇಂದು ಪುರಾತನ ಅವಶೇಷಗಳಾಗಿ ನಿಂತಿರುವುದನ್ನು ನೋಡಬಹುದಾಗಿದೆ.

ಆದರೆ ಇವೆಲ್ಲಾ ಸತ್ಯಗಳೂ ಕಣ್ಣ ಮುಂದಿದ್ದರೂ, ಮೂಲಭೂತವಾಗಿ ಇದರ ಅರಿವಿದ್ದರೂ ಪ್ರಾಣಿಗಳಲ್ಲೇ ಶ್ರೇಷ್ಠನೆನಿಸಿಕೊಂಡ ಮಾನವನು ತನ್ನ ಅಹಂಕಾರದಿಂದ ಮದ ದರ್ಪಗಳಿಂದ ಪ್ರಕೃತಿಯಾದಿಯಾಗಿ ಎಲ್ಲದರ ಮೇಲೆ ದುರಾಚಾರಗಳನ್ನು ಎಸಗಿ ತಮ್ಮ ತಮ್ಮಲ್ಲೇ ಹೊಡೆದಾಡುತ್ತಿರುವುದು, ವಿಪರ್ಯಾಸವೇ ಸರಿ.

ಮಹಾಭಾರತದ ಯಕ್ಷಪ್ರಶ್ನೆಯ ಸಂದರ್ಭದಲ್ಲಿ ಯಕ್ಷನು ಜಗತ್ತಿನಲ್ಲಿಯೇ ಆಶ್ಚರ್ಯಕರವಾದ ಸಂಗತಿ ಯಾವುದು ಎಂದು ಯುಧಿಷ್ಠಿರನನ್ನು ಕೇಳಲಾಗಿ ಯುಧಿಷ್ಠಿರನು ಅದಕ್ಕೆ ಉತ್ತರಿಸುತ್ತಾ ಮಾನವರಾದ ನಾವೆಲ್ಲಾ ಇಲ್ಲಿ ಹುಟ್ಟಿದ ಮೇಲೆ ಯಾವೂದೂ ಶಾಶ್ವತ ಅಲ್ಲ ಎಂದು ತಿಳಿದಿದ್ದರೂ ಸಾವು ಅನಿವಾರ್ಯ ಎಂಬ ಅರಿವಿದ್ದರೂ ನಮ್ಮ ಜೀವನ , ಯೌವನ ಎಲ್ಲವೂ ಹೀಗೆ ಇರುತ್ತದೆ ಎಂಬ ಭ್ರಮೆಯಲ್ಲಿ ಆಮೋದ ಪ್ರಮೋದಗಳಲ್ಲಿ ಮುಳುಗಿ ದುರಾಸೆಯಲ್ಲಿ ಎಲ್ಲವೂ ಬೇಕು ಎನ್ನುತ ಬಾಳಿ



ಕೊನೆಗೆ ಅಂತ್ಯ ಸಮೀಪಿಸಿದಾಗ ತಮ್ಮ ಪಾಪಗಳನ್ನು ಅರಿತು ಹಲುಬುವ ಪರಿ ಎಲ್ಲಕ್ಕಿಂತಲೂ ಆಶ್ಚರ್ಯಕರ ವಾದುದು ಉತ್ತರಿಸುತ್ತಾನೆ.

ಸಮಯದ ಕೈಗೊಂಬೆಗಳಾದ ನಾವು ಪ್ರತಿಕ್ಷಣ ಸರಿದು ಹೋಗುವ ಸಮಯಕ್ಕೆ ಕ್ಷಣ ಕ್ಷಣವೂ ಬದಲಾಗುವ ಪರಿಸ್ಥಿತಿಯನ್ನು ಅರಿತೇ ಮಾನಸಿಕವಾಗಿ ದೈಹಿಕವಾಗಿ ಇದನ್ನು ಅರಿತು ಬಾಳುವ ರೀತಿಯನ್ನು ರೂಢಿಸಿ ಕೊಳ್ಳಬೇಕು. ಕೆಲವೇ ದಿನಗಳ ಈ ಜೀವನದಲ್ಲಿ ದ್ವೇಷ ಅಸೂಯೆ ಹಿಂಸೆ ದುರಾಸೆಗಳಿಗೆ ಜಾಗ ನೀಡದೆ ನಮ್ಮ ಕೈಲಾದಷ್ಟೂ ಪರರಿಗೆ ಉಪಕರಿಸಿ ಬದುಕಿನ ಸಮಯ ಗಳನ್ನು ಸಾರ್ಥಕ ಪಡಿಸಿಕೊಂಡರೆ ಸಮಯದ ಕೈಗೊಂಬೆಗಳಾದ ಈ ಮಾನವ ಬೊಂಬೆಗಳ ಜೀವನದ ಉದ್ದೇಶ ಈ ಲೌಕಿಕ ಜಗತ್ತಿನಲ್ಲಿ ಈಡೇರಿದಂತಾಗುತ್ತದೆ.

ಹಂಪಿ ಟೈಮ್ಸ್
HAMPI TIMES

ಮೈಮೇಲೆ ಹರಿದ ಬಟ್ಟೆ ಇದ್ದರೂ ಚಿಂತೆಯಿಲ್ಲ. ಕೈಯಲ್ಲೊಂದು ಕನ್ನಡ ಪತ್ರಿಕೆ ಇರಲಿ.
ಡಿ..ವಿ.ಜಿ.

## ನಿತ್ಯ ಪಂಚಾಂಗ

ಮಾಸ: ಶ್ರಾವಣ । ಸಂವತ್ಸರ: ಕ್ರೋಧಿ

01–09–2024 – ಭಾನುವಾರ

| | |
|---|---|
| ತಿಥಿ | : ಚತುರ್ದಶಿ |
| ಪಕ್ಷ | : ಕೃಷ್ಣ |
| ನಕ್ಷತ್ರ | : ಆಶ್ಲೇಷ |
| ಯೋಗ | : ಪರಿಘ |
| ಕರಣ | : ವಿಷ್ಟಿ |
| ಸೂರ್ಯೋದಯ | : 06:10:18 |
| ಸೂರ್ಯಾಸ್ತ | : 18:42:56 |
| ರಾಹು ಕಾಲ | : 17:09–18:43 |
| ಯಮಘಂಡ ಕಾಲ | : 12:27–14:01 |
| ಗುಳಿಕ ಕಾಲ | : 15:35–17:09 |

## ತುಂಗಭದ್ರಾ ನೀರಿನ ಮಟ್ಟ



ಶನಿವಾರ : 31–08–2024

| | |
|---|---|
| ಗರಿಷ್ಠ ಮಟ್ಟ | 1633 ಅಡಿ |
| ಇಂದಿನ ಮಟ್ಟ | 1630.13 ಅಡಿ |
| ಒಳ ಹರಿವು | 34983 ಕ್ಯುಸೆಕ್ |
| ಹೊರ ಹರಿವು | 10067 ಕ್ಯುಸೆಕ್ |
| ಇಂದಿನ ಸಾಮರ್ಥ್ಯ | 94.552 ಟಿಎಂಸಿ |
| ಗರಿಷ್ಠ ಸಾಮರ್ಥ್ಯ | 105.788 ಟಿಎಂಸಿ |
| ಕಳೆದ ವರ್ಷ ಇದೇ ದಿನ | |
| ಇಂದಿನ ಮಟ್ಟ | 1625.16 ಅಡಿ |
| ಒಳ ಹರಿವು | 261 ಕ್ಯುಸೆಕ್ |
| ಹೊರ ಹರಿವು | 9075 ಕ್ಯುಸೆಕ್ |
| ಸಾಮರ್ಥ್ಯ | 77.012 ಟಿಎಂಸಿ |

Contact For News, Advt & Event Coverage
9448633038

# ಬೆಳೆ ಸಮೀಕ್ಷೆ ವರದಿ ಅಗತ್ಯ ಗೊಬ್ಬರ ಒದಗಿಸಲು ಸಹಕಾರಿ

## ಬೆಳೆ ಅಂದಾಜು ಸಮೀಕ್ಷೆ ಅಚ್ಚುಕಟ್ಟಾಗಿ ನಡೆಸಿ: ಎಡಿಸಿ ಸಿದ್ರಾಮೇಶ್ವರ



■ ಹಂಪಿ ಟೈಮ್ಸ್ ಕೊಪ್ಪಳ

2024–25ನೇ ಸಾಲಿನ ಮುಂಗಾರು ಹಂಗಾಮಿನ ಬೆಳೆ ಅಂದಾಜು ಸಮೀಕ್ಷೆಯು ನಿಯಮಾನುಸಾರ ಅಚ್ಚುಕಟ್ಟಾಗಿ ನಡೆಯುವಂತೆ ವಿವಿಧ ಇಲಾಖೆಗಳ ಮೂಲ ಕಾರ್ಯಕರ್ತರು, ಮೇಲ್ವಿಚಾರಕರು ಸೇರಿದಂತೆ ಪ್ರತಿಯೊಬ್ಬರು ಶ್ರದ್ಧೆಯಿಂದ ಕಾರ್ಯಪ್ರವೃತ್ತರಾಗಬೇಕು ಎಂದು ಅಪರ ಜಿಲ್ಲಾಧಿಕಾರಿ ಸಿದ್ರಾಮೇಶ್ವರ ಹೇಳಿದರು.

ಕೊಪ್ಪಳ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಕೃಷಿ ಇಲಾಖೆ ಹಾಗೂ ಜಿಲ್ಲಾ ಸಂಖ್ಯಿಕ ಇಲಾಖೆಯ ಸಹಯೋಗದಲ್ಲಿ ಶನಿವಾರ ಜಿಲ್ಲಾಡಳಿತ ಭವನದ ಹಾಲ್‌ನಲ್ಲಿ ಹಮ್ಮಿಕೊಂಡಿದ್ದ 2024–25ನೇ ಸಾಲಿನ ಮುಂಗಾರು ಹಂಗಾಮಿನ ಬೆಳೆ ಅಂದಾಜು ಸಮೀಕ್ಷೆ ತರಬೇತಿ ಕಾರ್ಯಾಗಾರ ಉದ್ಘಾಟಿಸಿ ಮಾತನಾಡಿದರು.

ಸ್ವತಃ ಮೂಲ ಕಾರ್ಯಕರ್ತರೇ ಹೋಗಿ ಸಮೀಕ್ಷೆಯನ್ನು ಮಾಡಬೇಕು. ಕಾರ್ಯಕರ್ತರು, ರೈತರ ಜೊತೆ ನಿರಂತರ ಸಂಪರ್ಕದಲ್ಲಿರಬೇಕು. ಬೆಳೆ ಕಟಾವು ಸಮೀಕ್ಷೆಯು ನಮಗಷ್ಟೆ ಅಲ್ಲದೇ ದೇಶ, ರಾಜ್ಯಕ್ಕೆ ಬಹಳ ಅನುಕೂಲವಾಗಿದೆ. ಇದರಿಂದ ಯಾವ ಯಾವ ಬೆಳೆಗೆ ಹೆಚ್ಚು ಒತ್ತು ಕೊಡಬಹುದು ಎನ್ನುವುದು ತಿಳಿಯುತ್ತದೆ ಹಾಗೂ ಬೆಳೆಗಳಿಗೆ ಸೂಕ್ತವಾದ ಗೊಬ್ಬರವನ್ನು ಒದಗಿಸಲು ಅನುಕೂಲವಾಗುತ್ತದೆ. ಜನಗಣತಿ ತರಹವೇ ಬೆಳೆ ಸಮೀಕ್ಷೆ ಮಾಡಬೇಕು. ಯಾವುದೇ ಕಾರಣಕ್ಕೂ ಬೆಳೆ ಇದ್ದುಕೊಂಡು ಬೆಳೆ ಸಮೀಕ್ಷೆಯನ್ನು ನಷ್ಟ ಗೊಳಿಸುವಂತಿಲ್ಲ. ಅಂತಹವರ ವಿರುದ್ಧ ಶಿಸ್ತು ಕ್ರಮ ಕೈಗೊಳ್ಳಲಾಗುವುದು, ಇದ್ದರಿಂದ ಪ್ರತಿಯೊಬ್ಬರು ನಿಷ್ಠೆ ಹಾಗೂ ಪ್ರಾಮಾಣಿಕತೆಯಿಂದ ಸಮೀಕ್ಷೆ ಮಾಡಿ ಎಂದು ಹೇಳಿದರು.

ಕೃಷಿ ಇಲಾಖೆಯ ಉಪನಿರ್ದೇಶಕ ಸಹದೇವ್ ಯರಗುಪ್ಪ ಅವರು ಮಾತನಾಡಿ, ಬೆಳೆ ಕಟಾವು ಸಮೀಕ್ಷೆಯಿಂದ ರೈತರು ಆರ್ಥಿಕವಾಗಿ ಬೆಳೆಯಲು ಅನುಕೂಲವಾಗುತ್ತದೆ. ಯಾವುದೇ ಸಂದರ್ಭದಲ್ಲಿಯೂ ಕಟಾವು ಪ್ರಯೋಗಗಳು ವ್ಯಪಗಥವಾಗದಂತೆ ನೋಡಿಕೊಳ್ಳಿ. ಇಲಾಖಾವಾರು ಅಧಿಕಾರಿಗಳ ಮಾಹಿತಿಯನ್ನಾಧರಿಸಿ ಪ್ರಯೋಗಗಳನ್ನು ಹಂಚಿಕೆ ಮಾಡಲಾಗಿರುತ್ತದೆ. ಮೂಲ ಕಾರ್ಯಕರ್ತರು ಮೊಬೈಲ್ ಗಳ ಮೂಲಕ ಸಮೀಕ್ಷೆಯನ್ನು ಮಾಡಬಹುದು ಎಂದು ತಿಳಿಸಿದರು.

ಜಿಲ್ಲಾ ಸಾಂಖ್ಯಿಕ ಅಧಿಕಾರಿ ಸುಧಾಕರ ಮಾನೆ ಅವರು ಮಾತನಾಡಿ, ಬೆಳೆ ಅಂದಾಜು ಸಮೀಕ್ಷಾ ಕಾರ್ಯಕ್ಕೆ ಕಂದಾಯ, ಕೃಷಿ, ತೋಟಗಾರಿಕೆ ಮತ್ತು ಪಂಚಾಯತ್ ರಾಜ್ ಇಲಾಖೆಯ ಅಧಿಕಾರಿಗಳುಮೂಲಕಾರ್ಯಕರ್ತರಾಗಿರುತ್ತಾರೆ. ಲಭ್ಯವಿರುವ ಇಲಾಖಾವಾರು ಅಧಿಕಾರಿಗಳ ಮಾಹಿತಿಯನ್ನಾಧರಿಸಿ ಪ್ರಯೋಗಗಳನ್ನು ಹಂಚಿಕೆ ಮಾಡಲಾಗಿರುತ್ತದೆ. ವಿವಿಧ ಇಲಾಖೆಯ ಅಧಿಕಾರಿಗಳನ್ನು ಮೇಲ್ವಿಚಾರಣಾಧಿಕಾರಿ ಎಂದು ನೇಮಕ ಮಾಡಲಾಗಿದ್ದು, ಈ ಬಾರಿ ಕಡ್ಡಾಯವಾಗಿ ಕಟಾವಿನ ಸಂದರ್ಭದಲ್ಲಿ ಮೂಲ ಕಾರ್ಯಕರ್ತರು ಬೆಳೆ ಸಮೀಕ್ಷೆ ತೆಗೆದುಕೊಂಡಿದ್ದಾರೆಯೇ ಎಂದು ಮೇಲ್ವಿಚಾರಕರು ಪರಿಶೀಲಿಸಬೇಕು. ಬೆಳೆವಿಮೆ ತುಂಬಿದ ಕನಿಷ್ಠ ಮೂವರು ರೈತರನ್ನು ಸಮೀಕ್ಷೆಗೆ ಕಡ್ಡಾಯವಾಗಿ ಕರೆದುಕೊಂಡು ಹೋಗಬೇಕು ಎಂದರು.

ಬಳ್ಳಾರಿ ಜಿಲ್ಲೆಯ ಜಿಲ್ಲಾ ಸಂಖ್ಯಾ ಸಂಗ್ರಹಣಧಿಕಾರಿ ಗಳಾದ ಶ್ರೀ ರಾಕೇಶ್ ಅವರು ಕ್ರಾಪ್ ಕಟ್ಟಿಂಗ್ ಎಕ್ಸ್‌ಪೆರಿಮೆಂಟ್ ಕುರಿತು ತರಬೇತಿ ನೀಡಿದರು. ಈ ಸಂದರ್ಭದಲ್ಲಿ ಎಲ್ಲಾ ತಾಲೂಕಿನ ತಹಶೀಲ್ದಾ ರರು, ಕಂದಾಯ ಅಧಿಕಾರಿಗಳು ಹಾಗೂ ಗ್ರಾಮ ಲೆಕ್ಕಿಗರು ಸೇರಿದಂತೆ ಮೂಲ ಕಾರ್ಯಕರ್ತರು ಉಪಸ್ಥಿತರಿದ್ದರು.

# ಹಂಪಿ ಕಲಾ ವೈಭವ ಕಣ್ತುಂಬಿಕೊಂಡ ಕೇಂದ್ರ ಹಣಕಾಸು ಆಯೋಗದ ನಿಯೋಗ



■ ಹಂಪಿ ಟೈಮ್ಸ್ ಹೊಸಪೇಟೆ

ಭಾರತ ಸರ್ಕಾರದ 16ನೇ ಕೇಂದ್ರ ಹಣಕಾಸು ಆಯೋಗದ ನಿಯೋಗವು ಶನಿವರವೂ ವಿಜಯನಗರ ಜಿಲ್ಲೆಯ ಹಂಪಿಯ ಪರಿಸರದಲ್ಲಿ ಸಂಚರಿಸಿತು. ನಿಯೋಗದ ಅಧ್ಯಕ್ಷರಾದ ಅರವಿಂದ ಪಿ, ಸದಸ್ಯರಾದ ಅಜಯ್ ನಾರಾಯಣ ಝ್ಹಾ, ಅಣ್ಣೈ ಜಾರ್ಜ್ ಮ್ಯಾಥ್ಯೂ, ಸೌಮ್ಯ ಕಾಟಿ ಗೋಶ್, ಮನೋಜ ಪಾಂಡೆ, ಜಂಟಿ ನಿರ್ದೇಶಕರಾದ ರಾಹುಲ್ ಜೈನ್, ಉಪ ಕಾರ್ಯದರ್ಶಿ ಅಜಿತ್‌ಕುಮಾರ ರಂಜನ್, ಅಧ್ಯಕ್ಷರ ಆಪ್ತ ಕಾರ್ಯದರ್ಶಿ ಕುಮಾರ ವಿವೇಕ್, ಉಪ ಕಾರ್ಯದರ್ಶಿ ಸಂದೀಪ್ ಕುಮಾರ, ವಿಶೇಷ ಕರ್ತವ್ಯಾಧಿಕಾರಿ ಓಂ ಸಾಯಿ, ಸದಸ್ಯರ ಆಪ್ತ ಕಾರ್ಯದರ್ಶಿ ಪ್ರೊಮಿಳಾ ರಾಜವಂಶಿ, ಸದಸ್ಯರ ಕನ್ಸಲ್ಟಂಟ್ ಸುಧಾ ರಾಜಗೋಪಾಲನ್ ಅವರನ್ನೊಳಗೊಂಡ ತಂಡವು ಬೆಳಗ್ಗೆ ಮೊದಲಿಗೆ ಲೋಟಸ್ ಮಹಲ್‌ಗೆ ಭೇಟಿ ಮೂಲಕ ವೀಕ್ಷಣೆ ಆರಂಭಿಸಿತು. ಬಳಿಕ ಹಜಾರಾ ರಾಮ ಟೆಂಪಲ್, ರಾಯಲ್ ಎನ್‌ಕ್ಲೋಜರ್, ರಾಣಿ ಸ್ನಾನಗೃಹ, ಉಗ್ರ ನರಸಿಂಹ, ಬದವಲಿಂಗ್‌ಗಳಿಗೆ ಭೇಟಿ ನೀಡಿದರು. ಬಳಿಕ ಇವೋಲ್ವ್ ಬ್ಯಾಕ್‌ಗೆ ಆಗಮಿಸಿ ಅಲ್ಲಿಂದ ವಿಶೇಷ ಬಸ್ ಮೂಲಕ ವಿಜಯನಗರದಿಂದ ನಿರ್ಗಮಿಸಿದರು.


# ಜನಪದ ಗ್ರಾಮೀಣ ಮಹಿಳೆಯರ ಜೀವಾನುಭವ

## ಕನ್ನಡ ವಿವಿ ಸಂಗೀತ ಮತ್ತು ನೃತ್ಯ ವಿಭಾಗ ಮುಖ್ಯಸ್ಥ ಡಾ.ವೀರೇಶ ಬಡಿಗೇರ ಹೇಳಿಕೆ

■ ಹಂಪಿ ಟೈಮ್ಸ್ ಹೊಸಪೇಟೆ

ಜನಪದ ಹಾಡು, ಕಥೆ, ಒಗಟು, ಒಡುಪು, ಗಾದೆಗಳು, ಗ್ರಾಮೀಣ ಮಹಿಳೆಯರ ಜೀವನಾನುಭಾವದ ಅಭಿವ್ಯಕ್ತಿಯ ಘನತೆಯನ್ನು ಎತ್ತರಿಸಿದ ಪ್ರಕಾರಗಳಾಗಿವೆ ಎಂದು ಸಂಗೀತ ಮತ್ತು ನೃತ್ಯ ವಿಭಾಗ ಮುಖ್ಯಸ್ಥ ಡಾ.ವೀರೇಶ ಬಡಿಗೇರ ಹೇಳಿದರು.

ಕನ್ನಡ ವಿಶ್ವವಿದ್ಯಾಲಯದ ಸಂಗೀತ ಮತ್ತು ನೃತ್ಯ ವಿಭಾಗವು ಹಮ್ಮಿಕೊಂಡಿದ್ದ ಶುಕ್ರವಾರ ಹಮ್ಮಿಕೊಂಡಿದ್ದ ವಿಶೇಷ ಉಪನ್ಯಾಸ–2ರ ಅಧ್ಯಕ್ಷತೆವಹಿಸಿ ಮಾತನಾಡಿದರು. ಬದುಕಿನ ಹಲವು ಸಂಕೀರ್ಣತೆಯನ್ನು ಎದುರಿಸುತ್ತಲೇ ಹಾಡುವ ಮತ್ತು ಆಡುವ ಸ್ವಾತಂತ್ರ್ಯವನ್ನು ಸಂದರ್ಭದ ಅಗತ್ಯಕ್ಕೆ ತಾನೇ ಸೃಷ್ಟಿಸಿಕೊಳ್ಳುವ ಮೂಲಕ ಬದುಕಿನ ಒತ್ತಡಗಳನ್ನು ನಿಭಾಯಿಸಲು ಕಲಿತಿದ್ದಾಳೆ. ತನ್ನ ಧ್ವನಿಗೆ ತಾನೇ ಒಂದು ಸಾಮಾಜಿಕ ಗೌರವವನ್ನು ಸ್ಥಾಪಿಸಿಕೊಂಡಿದ್ದಾಳೆ ಎಂದರು.



ಡಾ. ಅರ್ಜುನ ಗೊಳಸಂಗಿ ಅವರು ಜನಪದ ಸಾಹಿತ್ಯ ಸಂಸ್ಕೃತಿ ಹಾಗೂ ಗಾಯನ ಪ್ರಾತ್ಯಕ್ಷಿಕೆ ಕುರಿತು ಮಾತನಾಡಿ, ಜನಪದ ಸಾಹಿತ್ಯ ಕ್ರಿಯಾಮೂಲವಾದದ್ದು. ಕ್ರಿಯೆ ಇಲ್ಲದಿದ್ದರೆ ಅದಕ್ಕೆ ಜಾಗವಿಲ್ಲ ಜನಪದ ಹಾಡು, ಕತೆ, ಗಾದೆ, ಒಡಪು, ಹಂತಿಪದ, ಇವೆಲ್ಲವೂ ಕ್ರಿಯಾಶೀಲ ಸಮಾಜದ ಜೀವಂತ ಅಭಿವ್ಯಕ್ತಿಗಳು. ಇಂದು ಜನಪ್ರಿಯ ಹಾಡುಗಳು ಅತಿಯಾಗಿ ಹುಟ್ಟುತ್ತಿವೆ. ಅವು ನಿಜವಾದ ಜನಪದ ಹಾಡುಗಳಲ್ಲ. ತುತ್ತ ತಪ್ಪಿದರ ತೂಕ ತಪ್ಪತೈತಿ' ಎನ್ನುವ ಜನಪದರ ಮಾತು ಬಹಳ ಅರ್ಥಪೂರ್ಣವಾದದ್ದು. ಸುಸಂಸ್ಕೃತ ನಡೆ, ನುಡಿಗಳು ಬದುಕಿನ ಸೂತ್ರಗಳಾಗಬೇಕು. ಇಂದು ವಿಕೃತಿಯೇ ಎಲ್ಲ ಕಡೆ ರಾರಾಜಿಸುತ್ತಿದೆ. ಇಂತಹ ಹೊತ್ತಲ್ಲಿ ವಿದ್ಯಾರ್ಥಿಗಳಾದ ನೀವು ಜನಪದ ಸಂಸ್ಕೃತಿ ಸಂಭ್ರಮಗಳನ್ನು ಮೈಗೂಡಿಸಿಕೊಂಡ ಸೃಜನಶೀಲ ಹಾಗೂ ಪ್ರಜ್ಞಾವಂತ ನಾಗರಿಕರಾಗಬೇಕು, ಬಿರುಕಿಲ್ಲದ ಬಾಳು ಬದುಕಬೇಕು ಎಂದು ಹೇಳಿದರು.

# ಬಸ್ ಪ್ರಯಾಣಿಕರ ಕುಂದುಕೊರತೆ ಫೋನ್ ಇನ್ ಕಾರ್ಯಕ್ರಮ ಸೆ.2

## ಕುಂದುಕೊರತೆ–ಬಸ್ ಸೌಲಭ್ಯಕ್ಕಾಗಿ ಕರೆಮಾಡಿ ಮೊ.7760992152, 6366423885

■ ಹಂಪಿ ಟೈಮ್ಸ್ ಬಳ್ಳಾರಿ

ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ನಿಗಮ ಬಳ್ಳಾರಿ ವಿಭಾಗದ ವತಿಯಿಂದ ಬಳ್ಳಾರಿ ಭಾಗದ ಸಾರ್ವಜನಿಕ ಪ್ರಯಾಣಿಕರ ಕುಂದು ಕೊರತೆಗಳನ್ನು ಆಲಿಸಲು ಸೆ.02 ರಂದು ಮಧ್ಯಾಹ್ನ 3.30 ಗಂಟೆಯಿಂದ ಸಂಜೆ 5.30 ಗಂಟೆಯವರೆಗೆ "ಫೋನ್ ಇನ್ ಕಾರ್ಯಕ್ರಮ" ಏರ್ಪಡಿಸಲಾಗಿದೆ ಎಂದು ಕಕರಸಾ ನಿಗಮ ಬಳ್ಳಾರಿ ವಿಭಾಗದ ವಿಭಾಗೀಯ ನಿಯಂತ್ರಣಾಧಿಕಾರಿ ಇನಾಯತ್ ಬಾಗ್‌ಬಾನ್ ತಿಳಿಸಿದ್ದಾರೆ.

ಬಳ್ಳಾರಿ ಭಾಗದ ಸಾರ್ವಜನಿಕ ಪ್ರಯಾಣಿಕರ ಬಸ್ ಸೌಕರ್ಯದ ಕುರಿತು ಕುಂದು ಕೊರತೆ, ಸಮಸ್ಯೆಗಳಿದ್ದಲ್ಲಿ ಮೊ.7760992152, 6366423885 ಗೆ ಕರೆ ಮಾಡಿ ತಿಳಿಸಬಹುದು. ಬಳ್ಳಾರಿ ವಿಭಾಗದ ವ್ಯಾಪ್ತಿಯಲ್ಲಿ ಪ್ರತಿ ತಿಂಗಳ ಒಂದನೇ ಸೋಮವಾರದಂದು ಬಳ್ಳಾರಿ, ಸಿರುಗುಪ್ಪ, ಕುರುಗೋಡು, ಕಂಪ್ಲಿ ಮತ್ತು ಸಂಡೂರು ತಾಲ್ಲೂಕುಗಳಿಗೆ ಸಂಬಂಧಿಸಿದಂತೆ ಸಾರ್ವಜನಿಕ ಪ್ರಯಾಣಿಕರ ಬಸ್ ಸೌಕರ್ಯದ ಕುರಿತು ಕುಂದು–ಕೊರತೆಗಳನ್ನು ಆಲಿಸಲು 'ಫೋನ್ ಇನ್ ಕಾರ್ಯಕ್ರಮ' ಆಯೋಜಿಸಲಾಗುತ್ತಿದೆ. ಸಾರ್ವಜನಿಕ ಪ್ರಯಾಣಿಕರ ಬಸ್ ಸೌಕರ್ಯದ ಕುರಿತು ಕುಂದು ಕೊರತೆಗಳಿದ್ದಲ್ಲಿ ಆಲಿಸಿ, ಅಗತ್ಯ ಕ್ರಮ ಕೈಗೊಳ್ಳಲಾಗುವುದು. ಸಾರ್ವಜನಿಕ ಪ್ರಯಾಣಿಕರು "ಫೋನ್ ಇನ್ ಕಾರ್ಯಕ್ರಮ"ವನ್ನು ಸದುಪಯೋಗಪಡಿಸಿಕೊಳ್ಳಬೇಕು ಎಂದು ತಿಳಿಸಿದ್ದಾರೆ.

# ವಿದ್ಯಾರ್ಥಿ ವೇತನಕ್ಕೆ ಅರ್ಜಿ ಆಹ್ವಾನ

ಹಂಪಿ ಟೈಮ್ಸ್ ಹೊಸಪೇಟೆ

ಜಿಲ್ಲಾ ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಇಲಾಖೆಯು ಕೇಂದ್ರ ಹಾಗೂ ರಾಜ್ಯ ಸರ್ಕಾರದಿಂದ ವಿದ್ಯಾರ್ಥಿ ವೇತನ ನೀಡಲು ಅರ್ಹ ವಿಕಲಚೇತನದಿಂದ ಆನ್‌ಲೈನ್ ಮೂಲಕ ಅರ್ಜಿ ಆಹ್ವಾನಿಸಿದೆ.

ಆಸಕ್ತರು ಕೇಂದ್ರ ಸರ್ಕಾರದ ಮೆಟ್ರಿಕ್ ಪೂರ್ವ ವಿದ್ಯಾರ್ಥಿ ವೇತನಕ್ಕಾಗಿ ಆಗಸ್ಟ್ 31 ಹಾಗೂ ಮತ್ತು ನಂತರ ಮತ್ತು ಟಾಪ್ ಕ್ಲಾಸ್ ವಿದ್ಯಾರ್ಥಿ ವೇತನಕ್ಕಾಗಿ ಅಕ್ಟೋಬರ್ 31ರೊಳಗಾಗಿ ಜಾಲತಾಣ: ಛಿಣಣಠಿ://ಞ್ಞಿಠಟಚಿಡ್ಝುಥಿ.ರಠತ.ಏಟಿ ನಲ್ಲಿ ಅರ್ಜಿ ಸಲ್ಲಿಸಬಹುದಾಗಿದೆ. ರಾಜ್ಯ ಸರ್ಕಾರದ ವಿದ್ಯಾರ್ಥಿ ವೇತನಕ್ಕಾಗಿ ಮೆಟ್ರಿಕ್ ನಂತರ ಹಾಗೂ ಮೆಟ್ರಿಕ್ ನಂತರದ ಉನ್ನತ ವ್ಯಾಸಂಗ ಮಾಡುತ್ತಿರುವ ವಿಕಲಚೇತನ ವಿದ್ಯಾರ್ಥಿಗಳು ಜಾಲತಾಣ: ಛಿಣಣಠಿ://ಠಿ.ಠಿಥಿಣಟಚಿಣಡಿಟಿಥಿ.ಇಚಿಡಿಟಿಚಿಣಚಿಇಚಿ.ರಠತ.ಏಟಿ ಮೂಲಕ ಅರ್ಜಿ ಸಲ್ಲಿಸಲು ಅಕ್ಟೋಬರ್ 31 ಕೊನೆಯ ದಿನವಾಗಿರುತ್ತದೆ.

ವಿದ್ಯಾರ್ಥಿ ವೇತನ ಸೌಲಭ್ಯಕ್ಕಾಗಿ ವಿಕಲಚೇತನರ ವಿಶಿಷ್ಟ ಗುರುತಿನ ಚೀಟಿ (ಯು.ಡಿ.ಐ.ಡಿ) ಹೊಂದಿರುವ ವಿದ್ಯಾರ್ಥಿಗಳು ಮಾತ್ರ ಅರ್ಜಿ ಸಲ್ಲಿಸಲು ಸೂಚಿಸಲಾಗಿದೆ. ಹೆಚ್ಚಿನ ಮಾಹಿತಿಗಾಗಿ ಹೊಸಪೇಟೆ ತಾಲ್ಲೂಕಿನ ಎಮ್‌ಆರ್‌ಡಬ್ಲ್ಯೂ ಜೆ.ರವಿಕುಮಾರ ನಾಯಕ ಮೊ–994525991, ಹರಪನಹಳ್ಳಿ ತಾಲ್ಲೂಕಿನ ಎಮ್‌ಆರ್‌ಡಬ್ಲ್ಯೂ ಆರ್.ಧನರಾಜ್ ಮೊ–9901182525, ಕೂಡ್ಲಿಗಿ ತಾಲ್ಲೂಕಿನ ಎಮ್‌ಆರ್‌ಡಬ್ಲ್ಯೂ ಚೌಡೇಶ ಮೊ–8217626361, ಹೂವಿನ ಹಡಗಲಿ ತಾಲ್ಲೂಕಿನ ಎಮ್‌ಆರ್‌ಡಬ್ಲ್ಯೂ ಮಂಜುನಾಥ ಮೊ–9900890403, ಹಗರಿಬೊಮ್ಮನಹಳ್ಳಿ ತಾಲ್ಲೂಕಿನ ಎಮ್‌ಆರ್‌ಡಬ್ಲ್ಯೂ ಲಕ್ಷ್ಮಣ ಮೊ–9741185924, ಕೊಟ್ಟೂರು ತಾಲ್ಲೂಕಿನ ಎಮ್‌ಆರ್‌ಡಬ್ಲ್ಯೂ ಲಕ್ಷೀ ಮೊ–8296859012, ಹಾಗೂ ಜಿಲ್ಲಾ ಅಂಗವಿಕಲರ ಕಲ್ಯಾಣಾಧಿಕಾರಿಗಳ ಕಾರ್ಯಾಲಯ, ತಾಲ್ಲೂಕು ಪಂಚಾಯತಿ ಆವರಣ, ಸಂಡೂರು ರಸ್ತೆ, ಹೊಸಪೇಟೆ ಇವರನ್ನು ಕಚೇರಿಯ ಅವಧಿಯಲ್ಲಿ ಸಂಪರ್ಕಿಸಿ ಎಂದು ಜಿಲ್ಲಾ ವಿಕಲಚೇತನರ ಕಲ್ಯಾಣಾಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಪ್ರಕರಣಗಳ ಇತ್ಯರ್ಥಕ್ಕೆ ಇಲಾಖೆಗಳು ಸಹಕರಿಸಲಿ

## ನ್ಯಾ.ಮಹಾಂತೇಶ್ ಎಸ್ ದರಗದ ಹೇಳಿಕೆ | ಸೆ. 14ರಂದು ರಾಷ್ಟ್ರೀಯ ಲೋಕ್ ಅದಾಲತ್

■ ಹಂಪಿ ಟೈಮ್ಸ್ ಕೊಪ್ಪಳ

"ರಾಷ್ಟ್ರೀಯ ಲೋಕ್ ಅದಾಲತ್" ಕಾರ್ಯಕ್ರಮದ ಮೂಲಕ ರಾಜಿ ಆಗಬಲ್ಲ ಪ್ರಕರಣಗಳ ಇತ್ಯರ್ಥಕ್ಕೆ ಇಲಾಖೆಗಳು ಸಹಕರಿಸಬೇಕು ಎಂದು ಗೌರವಾನ್ವಿತ ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿಗಳಾದ ಮಹಾಂತೇಶ್ ಎಸ್ ದರಗದ ಅವರು ಹೇಳಿದರು.

ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರದ ವತಿಯಿಂದ ರಾಷ್ಟ್ರೀಯ ಲೋಕ್ ಅದಾಲತ್ ಆಚರಿಸುವ ಕುರಿತು ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರದ ಕಚೇರಿಯಲ್ಲಿ ಆಗಸ್ಟ್ 31ರಂದು ಸಂಬಂಧಿಸಿದ ಇಲಾಖೆಗಳ ಅಧಿಕಾರಿಗಳೊಂದಿಗೆ ಹಮ್ಮಿಕೊಂಡಿದ್ದ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ರಾಜ್ಯಾದ್ಯಂತ ಸೆಪ್ಟೆಂಬರ್ 14ರಂದು ರಾಷ್ಟ್ರೀಯ ಲೋಕ್ ಅದಾಲತ್ ನಡೆಯಲಿದ್ದು, ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರ ಇವರ ನಿರ್ದೇಶನದ ಮೇರೆಗೆ ಕೊಪ್ಪಳ ಜಿಲ್ಲೆಯಲ್ಲಿಯೂ ಸಹ ರಾಷ್ಟ್ರೀಯ ಲೋಕ್ ಅದಾಲತ್ ಜರುಗಲಿದೆ. ಜಿಲ್ಲೆಯ ಕೊಪ್ಪಳ, ಗಂಗಾವತಿ, ಕುಷ್ಟಗಿ ಮತ್ತು ಯಲಬುರ್ಗಾ ನ್ಯಾಯಾಲಯದಲ್ಲಿ ಚಾಲ್ತಿಯಲ್ಲಿರುವ ಪ್ರಕರಣಗಳು ಹಾಗೂ ಇನ್ನೂ ನ್ಯಾಯಾಲಯಕ್ಕೆ ದಾಖಲಿಸದೇ ಇರುವ ಪ್ರಕರಣಗಳನ್ನು ವ್ಯಾಜ್ಯಪೂರ್ವ ಪ್ರಕರಣಗಳು ಎಂದು ಪರಿಗಣಿಸಿ, ವಿವಿಧ ಪ್ರಕರಣಗಳಾದ



ಮೋಟಾರು ವಾಹನ ಅಪಘಾತ ಪರಿಹಾರದ ಪ್ರಕರಣಗಳು, ಅಸಲು ದಾವೆಗಳು, ಬ್ಯಾಂಕುಗಳಿಗೆ ಸಂಬಂಧಿಸಿದ ಪ್ರಕರಣಗಳು, ಭೂ ಸ್ವಾಧೀನ ಪ್ರಕರಣಗಳು, ವೈವಾಹಿಕ ಹಾಗೂ ಜೀವನಾಂಶ ಪ್ರಕರಣಗಳು, ಕಾನೂನಿನನ್ವಯ ರಾಜೀ ಆಗಬಹುದಾದ ಕ್ರಿಮಿನಲ್ ಪ್ರಕರಣಗಳು, ಚೆಕ್ ಬೌನ್ಸ್ ಪ್ರಕರಣಗಳು ಹಾಗೂ ರಾಜೀ ಆಗಬಹುದಾದ ಎಲ್ಲಾ ತರಹದ ಪ್ರಕರಣಗಳನ್ನು ಇತ್ಯರ್ಥಪಡಿಸಬಹುದು ಎಂದರು.

ಬ್ಯಾಂಕುಗಳು, ಕಂದಾಯ ಇಲಾಖೆ, ಗಣಿ ಮತ್ತು ಭೂವಿಜ್ಞಾನ ಇಲಾಖೆ, ಅರಣ್ಯ ಇಲಾಖೆ, ಅಬಕಾರಿ ಇಲಾಖೆ, ಕೆ.ಕೆ.ಆರ್.ಟಿ.ಸಿ., ಕಾರ್ಮಿಕ ಇಲಾಖೆ ಸೇರಿದಂತೆ ವಿವಿಧ ಇಲಾಖೆಗಳ ತೆರಿಗೆ ಹಾಗೂ ಇನ್ನಿತರ ರಾಜೀ ಆಗಬಹುದಾದ ಎಲ್ಲಾ ತರಹದ ಪ್ರಕರಣಗಳನ್ನು ಇತ್ಯರ್ಥಪಡಿಸಲು ಎಲ್ಲಾ ಇಲಾಖೆಗಳ ಅಧಿಕಾರಿಗಳ ಸಹಕಾರ ಅತ್ಯವಶ್ಯಕವಾಗಿದೆ. ರಾಷ್ಟ್ರೀಯ ಲೋಕ್ ಅದಾಲತ್ ನಿಂದಾಗಿ ಪ್ರಕರಣಗಳ ಇತ್ಯರ್ಥವಾಗುವುದಲ್ಲದೇ ಸರ್ಕಾರದ ಖಜಾನೆಗೆ ಹಣ ಬರುತ್ತದೆ. ಈ ಹಿನ್ನೆಲೆಯಲ್ಲಿ ಸೆ.14ಕ್ಕೆ ಜಿಲ್ಲೆಯಾದ್ಯಂತ ನಡೆಯುವ ರಾಷ್ಟ್ರೀಯ ಲೋಕ್ ಅದಾಲತ್ ಕಾರ್ಯಕ್ರಮದಲ್ಲಿ ಹೆಚ್ಚಿನ ಪ್ರಕರಣಗಳ ಇತ್ಯರ್ಥಕ್ಕೆ ಕೈ ಜೋಡಿಸಬೇಕು. ರಾಷ್ಟ್ರೀಯ ಲೋಕ್ ಅದಾಲತ್ ಕುರಿತು ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸಲು ಕೆ.ಕೆ.ಆರ್.ಟಿ.ಸಿ. ಯವರು ತಮ್ಮ ಬಸ್ ನಿಲ್ದಾಣಗಳಲ್ಲಿ ಹಾಗೂ ನಗರ ಸ್ಥಳೀಯ ಸಂಸ್ಥೆಗಳು ತಮ್ಮ ಕಸ ವಿಲೇವಾರಿ ವಾಹನಗಳ ಮೂಲಕ ಇನ್ನೂ ಹೆಚ್ಚು ಪ್ರಚಾರ ಮಾಡಿ, ರಾಜೀ ಆಗಬಹುದಾದ ಎಲ್ಲಾ ತರಹದ ಪ್ರಕರಣಗಳನ್ನು ಬಾಕಿ ಉಳಿಸದೆ ಇತ್ಯರ್ಥಪಡಿಸಲು ಸಹಕರಿಸಬೇಕು ಎಂದು ಸಂಬಂಧಿಸಿದ ಇಲಾಖೆಗಳ ಅಧಿಕಾರಿಗಳಿಗೆ ಸಲಹೆ ನೀಡಿದರು.

ಇದರ ಜೊತೆಗೆ ವಿವಿಧ ಇಲಾಖೆಗಳ ಮೂಲಕ ಸಾರ್ವಜನಿಕರಿಗೆ ಇರುವ ಸೌಲಭ್ಯಗಳು, ಸೇವೆಗಳು ಸಿಗುವಂತಾಗಬೇಕು. ಈ ನಿಟ್ಟಿನಲ್ಲಿ ತಮ್ಮ ತಮ್ಮ ಇಲಾಖೆಗಳ ಯೋಜನೆ, ಕಾರ್ಯಕ್ರಗಳ ಕುರಿತು ಹೆಚ್ಚಿನ ಅರಿವು ಮಾಡಿಸಿ, ಅರ್ಹರಿಗೆ ಸೌಲಭ್ಯ ಸಿಗುವಂತೆ ಕ್ರಮ ಕೈಗೊಳ್ಳಿ ಎಂದು ಅಧಿಕಾರಿಗಳಿಗೆ ಅವರು ಸೂಚನೆ ನೀಡಿದರು. ಸಭೆಯಲ್ಲಿ ವಿವಿಧ ಇಲಾಖೆಗಳ ಅಧಿಕಾರಿಗಳು, ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರದ ಸಿಬ್ಬಂದಿ ಹಾಗೂ ಮತ್ತಿತರರಿದ್ದರು.

# ತೋಟಗಾರಿಕೆ ಬೆಳೆ ಬೆಳೆಯುವರಿಂದ ಸಹಾಯಧನಕ್ಕಾಗಿ ಅರ್ಜಿ ಆಹ್ವಾನ

■ ಹಂಪಿ ಟೈಮ್ಸ್ ಬಳ್ಳಾರಿ

ಕೃಷಿ ಇಲಾಖೆ ವತಿಯಿಂದ ಪ್ರಸ್ತಕ ಸಾಲಿನಲ್ಲಿ ಪ್ರಧಾನ ಮಂತ್ರಿ ಕೃಷಿ ಸಿಂಚಾಯಿ ಯೋಜನೆಯ ಹನಿ ನೀರಾವರಿ ಕಾರ್ಯಕ್ರಮದಡಿ ತೋಟಗಾರಿಕೆ ಬೆಳೆ ಬೆಳೆಯುವ ಹಾಗೂ ಬೆಳೆಯಲು ಇಚ್ಛಿಸಿರುವ ರೈತ ಫಲಾನುಭವಿಗಳಿಗೆ ಸಹಾಯಧನ ನೀಡಲು ಉದ್ದೇಶಿಸಲಾಗಿದ್ದು, ಅರ್ಹರಿಂದ ಅರ್ಜಿ ಆಹ್ವಾನಿಸಲಾಗಿದೆ.

ಸಾಮಾನ್ಯ, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ವರ್ಗದ ಶೇ.90 ರಂತೆ ಗರಿಷ್ಠ 2 ಹೆಕ್ಟೇರ್‌ವರೆಗೆ ಹನಿ ನೀರಾವರಿ ಅಳವಡಿಕೆಗೆ ಸಹಾಯಧನ ನೀಡಲಾಗುತ್ತದೆ. ಅಲ್ಪಸಂಖ್ಯಾತವರ್ಗದವರಿಗೆಶೇ.15, ವಿಕಲಾಂಗಚೇತನರಿಗೆ ಶೇ.5 ಮತ್ತು ರೈತ ಮಹಿಳೆಯರಿಗೆ ಶೇ.33 ರಷ್ಟು ಅನುದಾನ ಮೀಸಲಿರಿಸಲಾಗಿದೆ. ಆಸಕ್ತ ರೈತರು ಹೆಚ್ಚಿನ ಮಾಹಿತಿಗಾಗಿ ಆಯಾ ತಾಲ್ಲೂಕಿನ ತೋಟಗಾರಿಕೆ ಇಲಾಖೆ ಕಚೇರಿಗೆ ಸಂಪರ್ಕಿಸಿ, ಮಾಹಿತಿ ಪಡೆದು ಅರ್ಜಿ ಸಲ್ಲಿಸಬಹುದು ಎಂದು ತೋಟಗಾರಿಕೆ ಇಲಾಖೆಯ ಉಪನಿರ್ದೇಶಕ ಸಂತೋಷ್ ಸಪ್ಪಂಡಿ ತಿಳಿಸಿದ್ದಾರೆ.

# ಸೆಪ್ಟೆಂಬರ್ 5ಕ್ಕೆ ಉದ್ಯಮಶೀಲತಾ ಪ್ರೇರಣಾ ಕಾರ್ಯಕ್ರಮ

ಮೊದಲ ಪುಟದಿಂದ

ಸ್ವಂತ ಉದ್ಯಮ ಸ್ಥಾಪನೆಗಾಗಿ ಸರ್ಕಾರ ಹಾಗೂ ಹಣಕಾಸು ಸಂಸ್ಥೆಗಳಿಂದ ದೊರೆಯುವ ನೆರವು, ಪ್ರೋತ್ಸಾಹ ಮತ್ತು ಮುಂದೆ ಕೈಗೊಳ್ಳಲಾಗುವ ಉದ್ಯಮಶೀಲತಾಭಿವೃದ್ಧಿ ತರಬೇತಿ ಇತ್ಯಾದಿ ವಿಷಯಗಳ ಕುರಿತು ಮಾಹಿತಿಯನ್ನು ನೀಡಲಾಗುವುದು. ಆಸಕ್ತ ಅಭ್ಯರ್ಥಿಗಳು ಹೆಸರು ನೋಂದಾಯಿಸಬಹುದು ಅಥವಾ ನೇರವಾಗಿ ಸೆಪ್ಟೆಂಬರ್ 5ರಂದು ತಾಲೂಕ ಪಂಚಾಯತಿಯಲ್ಲಿ ನಡೆಯುವ ಕಾರ್ಯಕ್ರಮದಲ್ಲಿ ಭಾಗವಹಿಸಬಹುದು. ಭಾಗವಹಿಸುವವರು ಕನಿಷ್ಟ 18 ವರ್ಷಗಳ ವಯಸ್ಸಿನವರಾಗಿರಬೇಕು ಹಾಗೂ ಓದಲು, ಬರೆಯಲು ಬರುತ್ತಿರಬೇಕು. ಹೆಚ್ಚಿನ ಮಾಹಿತಿಗಾಗಿ ಮೊ: 6362681190, 9986332736 ಇವರನ್ನು ಕಚೇರಿಯ ವೇಳೆಯಲ್ಲಿ ಸಂಪರ್ಕಿಸಬಹುದು ಎಂದು ವಿಜಯನಗರ ಜಿಲ್ಲೆಯ ಸಿಡಾಕ್‌ನ ಜಂಟಿ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

Printed by: MANJUNATHA .H .B Published by: A. SHUBHA. Owned by: A. SHUBHA and Printed at : AMRITH PRINTERS, No. 63/A, Opp. Police Station, Ramanagara, Hagaribommanahalli – 583212, Vijayanagara Dist., Karnataka. Published at : At Ward No.15, Near Bannimahankali Temple, 3rd Cross, New Amaravathi, Hospet - 583201, Vijayanagara Dist., Karnataka. Editor : BASAPUR BASAVARAJA, PRGI No:KARKAN/2023/88055